† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಮೈಸೂರು ರಾಜ್ಯದ ಲೋಕಸೇವಕ ಆಯೋಗದಮೇಲೆ, ಅಂದರೆ, 1963-64 ಮತ್ತು 1964-65ನೇ ಸಾಲಿನ ವರದಿಗಳ ಬಗ್ಗೆ ಮಾತನಾಡಿದ್ದಾರೆ. ಹಾಗೆ ಅವರು ಮಾತನಾಡುವಾಗ ನಮ್ಮ ಪ್ರಾಂತ್ಯದ ಆಯೋಗದ ನೇಮಕ ಮತ್ತು ಅದು ಕೆಲಸ ನಡೆಸತಕ್ಕ ರೀತಿ ನೀತಿಗಳ ವಿಚಾರ ವಾಗಿ ಬಹಳ ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಈ ಹಿಂದೆಯೂ ಸಹಾ ಇದೇ ರೀತಿಯಾದ ಕಟುವಾದ ಟೀಕೆಗಳನ್ನು ಮಾಡಿದ್ದಾಗ್ಯೂ ಸರ್ಕಾರದವರಿಗೆ ಇಂಥ ಒಂದು ಅವ್ಯವಸ್ಥೆಯಾದ ಪರಿಸ್ಥಿತಿ ಅನುಕೂಲವಾಗಿರುವುದರಿಂದ ಯಾರು ಏನಾದರೂ ಹೇಳಿಕೊಂಡು ಹೋಗಲಿ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನವರು ಏನು ಬೇಕಾದರೂ ಹೇಳಿಕೊಂಡು ಹೋಗಲಿ, ಸಾರ್ವಜನಿಕರು ಅವರಿಗೇನು ಬೇಕಾದರೆ ಅವರು ಹೇಳಿಕೊಂಡು ಹೋಗಲಿ ಒಟ್ಟಿನಲ್ಲಿ ಅವರಿಗೆ ಅನುಕೂಲವಾಗಿ ಕೆಲಸಗಳಾಗುತ್ತಿದ್ದರೆ ಸಾಕು ಇದನ್ನೇ ಮುಂದುವರಿಸಿಕೊಂಡು ಹೋಗೋಣ ಅನ್ನುವ ಒಂದು ತೀರ್ಮಾನಕ್ಕೆ ಸರ್ಕಾರದವರು ಬಂದಿರುವಂತೆ ಈ ವರದಿಗಳಿಂದ ಸ್ಪಷ್ಟವಾಗಿ ಕಂಡುಬರುತ್ತಿದೆ. ಆದರೆ ಇದರಲ್ಲಿಯೂ ಬಹಳ ರಾಜಕೀಯ ಇದೆ.

ನಾವು ಹಿಂದೆಲ್ಲಾ ಹೇಳುತ್ತಿದ್ದ ಹಾಗೆ ಈ ಆಯೋಗ ಕೇವಲ ಸರ್ಕಾರದವರೊಬ್ಬರ ಕೈಗೊಂಬೆಯಾಗಿರುವುದೇ ಅಲ್ಲ, ಇದು ಕಾಂಗ್ರೆಸ್ ಸಂಸ್ಥೆಯ ಕೈಗೊಂಬೆಯೂ ಆಗಿದೆ. ಆಯೋಗ ವನ್ನು ಈಗ ಹೀಗೆ ಪರಿವರ್ತನೆ ಮಾಡಲಾಗಿದೆ. ಆಯೋಗದವರು ಕೊಡತಕ್ಕ ಸಲಹೆಯನ್ನು ಸರ್ಕಾರದವರು ಪುರಸ್ಕರಿಸುತ್ತಿಲ್ಲ ಎಂಬ ವಿಚಾರವನ್ನು ಈ ಸಭೆಯಲ್ಲಿ ಪದೇ ಪದೇ ಪ್ರಸ್ತಾಪ ಮಾಡಲಾಗಿದೆ. ಹಾಗೆ ಸದಸ್ಯರು ಅವುಗಳನ್ನು ಪ್ರಸ್ತಾಪಮಾಡಿದ್ದರೂ ಸರ್ಕಾರದವರು ಮಾಮೂಲ ನಂತೆ ಅಸಮಂಜಸವಾದ ಉತ್ತರಗಳನ್ನು ಕೊಡುತ್ತಾ ಅವರು ನೀತಿಯ ನಿಲುವನ್ನೇ ಸಮರ್ಥನೆ ಮಾಡಿಕೊಂಡಿದ್ದಾರೆ; ಇದು ಬಹಳ ವಿಷಾದಕರ ವಿಚಾರ; ಮತ್ತು ಬಹಳ ಖಂಡನೀಯವಾದ ವಿಷಯವೂ ಹೌದು. ಇದು ಹೀಗಾಗಬಾರದಾಗಿತ್ತು. ಇದರಿಂದ ದೇಶದಲ್ಲಿ ದೊಡ್ಡ ಅನ್ಯಾಯ ಗಳಾಗುತ್ತದೆ. ಮುಂದೆ ಯಾರೇ ಬರಲಿ ಆ ಅನ್ಯಾಯಗಳನ್ನು ಸರಿಪಡಿಸುವುದಕ್ಕೆ ಸಾಧ್ಯ

(ಶ್ರೀ ಎಸ್. ಗೋಪಾಲಗೌಡ)

ವಾಗುವುದಿಲ್ಲ. ನಾವು ಬಹಳ ಹಿಂದಿನಿಂದಲೂ ಇಲ್ಲಿ ಟೂರಿಜಂ, ವಿದ್ಯಾಭ್ಯಾಸ ಇತ್ಯಾದಿ ಏಳು ಇಲಾಖೆಗಳ ಕೇಡರ್ ಅಂಡ್ ರೆಕ್ರೂಟ್‌ಮೆಂಟು ರೂಲ್ಸ್‌ಗಳನ್ನು ತಯಾರಿಸಿಲ್ಲ, ಅವುಗಳನ್ನು ಕೂಡಲೇ ಮಾಡಿ ಇಂಟರ್‌ಸ್ಟೇಟ್ ಸೀನಿಯಾರಿಟಿ ಪಟ್ಟಿಯನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದೇವೆ, 1964-65ರಲ್ಲಿ ಕೂಡ ಈ ವಿಚಾರವನ್ನು ಕೇಳಿದ್ದೇವೆ. ಆದರೆ ಸರ್ಕಾರದವರು ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡುತ್ತಿದ್ದೇವೆ, ತಯಾರಿಸುತ್ತಿದ್ದೇವೆ, ತಯಾರಿಸುತ್ತಿದ್ದೇವೆ ಎಂಬುದಾಗಿ 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆ ಯಾವಾಗ ಆಯಿತೋ ಆಗಿನಿಂದಲೂ ಮಾಡುತ್ತಿದ್ದೇವೆ ಎಂದು ಹೇಳುತ್ತಲೇ ಬರುತ್ತಿದ್ದಾರೆ, ಅವರೇನು ಮಾಡುತ್ತಿದ್ದಾರೆ ಎಂಬುದು ಆ ಇಲಾಖೆಗಳಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಗೊತ್ತಾಗಬೇಕು. ಈ ವರದಿಯಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ :—

> "In spite of reminders by the Commission, Cadre and Recruitment Rules in respect of the following Departments have not been issued......"

ಇನ್ನೊಂದು ವಿಚಾರ, ಸ್ವಾಮಿ, ನೌಕರರಿಗೆ ಪ್ರಮೋಷನ್ ಕೊಡತಕ್ಕ ವಿಚಾರದಲ್ಲಿ ಕಾನ್‌ಫಿಡೆನ್‌ಷಿಯಲ್ ರೆಕಾರ್ಡ್ ಎಂತ ಒಬ್ಬೊಬ್ಬ ನೌಕರನಿಗೂ ಒಂದೊಂದು ಕಾನ್‌ಫಿಡೆನ್‌ಷಿಯಲ್ ರೆಕಾರ್ಡಿರುತ್ತದೆ. ಆದನ್ನು ಮೂರು ನಾಲ್ಕು ವರ್ಷಗಳ ತನಕ ಹಾಗೇ ಖಾಲಿಯಾಗಿಟ್ಟಿದ್ದು ಆ ನೌಕರನಿಗೆ ಪ್ರಮೋಷನ್ ಕೊಡತಕ್ಕ ಸಂದರ್ಭವೊದಗಿದಾಗ ಅವನು ಆ ಇಲಾಖೆಯ ಅಧಿಕಾರಿಗೆ ಬೇಡದವನಾಗಿದ್ದರೆ, ಆಗ ಮೂರು ವರ್ಷಗಳ ನಂತರ ಆ ಕಾನ್‌ಫಿಡೆನ್‌ಸಿಯಲ್ ವರದಿಯಲ್ಲಿ ಅವನು ಪ್ರಮೋಷನ್ನಿಗೆ ಅನರ್ಹನಾಗಿದ್ದಾನೆಂದು ಅದರಲ್ಲಿ ಬರೆಸುತ್ತಾರೆ, ಈ ಪ್ರಕಾರವಾಗಿ ತಮಗೆ ಬೇಡವಾದವರಿಗೆ ಪ್ರಮೋಷನ್‌ಗಳನ್ನು ಕೊಡದಂತೆ ತಪ್ಪಿಸತಕ್ಕ ಅನ್ಯಾಯ ಅಪರಾಧಗಳನ್ನು ಮಾಡತಕ್ಕ ಮಟ್ಟಕ್ಕೆ ಇಲಾಖೆಯ ಅಧಿಕಾರಿಗಳೂ ಮತ್ತು ಮಂತ್ರಿಗಳೂ ಇಳಿದಿದ್ದಾರೆ ಅನ್ನುವುದನ್ನು ಈ ವರದಿಯಿಂದ ತಿಳಿದುಕೊಳ್ಳಬಹುದು.

> "......In a few cases the confidential reports of the officials were prepared two or three years after the period to which they purported to relate."

ಈ ರೀತಿ ವರದಿಗಳನ್ನು ಬರೆಯಬಾರದೆಂದೂ, ಇದನ್ನು ಕೂಡಲೆ ಕೈಬಿಡಬೇಕೆಂದೂ, ಹಾಗೆ ಇದನ್ನೇ ಮುಂದುವರಿಸಿದರೆ ಅಂಥವರಿಗೆ, ಆ ಅಧಿಕಾರಿಗಳಿಗೆ ತಕ್ಕ ಶಿಕ್ಷೆ ಮಾಡಬೇಕೆಂದು ಅವರು ಹೇಳಿದ್ದಾರೆ. ಅದನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ : ಯಾರಾದರೊಬ್ಬ ನೌಕರನಿಗೆ ಪ್ರಮೋಷನ್ ಮಾಡಬಾರದೆಂಬ ಅಭಿಪ್ರಾಯವಿದ್ದರೆ ಅಂಥ ನೌಕರನ ಕಾನ್‌ಫಿಡೆನ್‌ಷಿಯಲ್ ರಿಪೋರ್ಟಿನಲ್ಲಿ ಅಲ್ಲಸಲ್ಲದ್ದನ್ನು ಬರೆದು ಅವನಿಗೆ ದೊರೆಯಬೇಕಾದ ಪ್ರಮೋಷನ್ನನ್ನು ತಪ್ಪಿಸುವಂಥ ಅಯೋಗ್ಯ ಅಧಿಕಾರಿಗಳು ಇಲ್ಲದ್ದಾರೆ. ಇಂಥ ಅಯೋಗ್ಯಕಾರ್ಯವನ್ನು ಸ್ವತಃ ತಾವಾಗೇ ಮಾಡತಕ್ಕಂಥ ಅಧಿಕಾರಿಗಳು ಇದ್ದಾರೆಂದು ಹೇಳುತ್ತಿರುವಾಗ ಅವರು ಏನೇನು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವರು ಏಕೆ ಹಾಗೆ ಬರೆಯುತ್ತಾರೆಂಬುದನ್ನು ನಾವಿಲ್ಲಿ ಚರ್ಚೆಮಾಡುವುದಕ್ಕೆ ಅವಕಾಶವಿಲ್ಲ.

ಸ್ವಾಮಿ, ಒಬ್ಬ ಸದಸ್ಯರು ಆಗಲೇ ಮಾತನಾಡುತ್ತಾ ಈ ಇಂಟರ್‌ವ್ಯೂವನ್ನು ಒಂದು 'ಫಾರ್ಸ್' ಎಂತ ಕರೆದಿದ್ದಾರೆ. ಆದರೆ ಈ ಆಡಳಿತಯಂತ್ರ ಸಾರ್ವಜನಿಕ ಮೇಲೆ ಏನು ಒಂದು ಪರಿಣಾಮವನ್ನು ಬೀರುತ್ತದೆಂದರೆ : ಸರ್ಕಾರಿ ನೌಕರಿಗೆ ಸೇರಬಯಸತಕ್ಕ ಜನರೇನಿದ್ದಾರೆ ಅವರ ಮನಸ್ಸಿನಲ್ಲಿ ಸರ್ಕಾರಿ ನೌಕರಿಗೆ ಸೇರಿ ಅಲ್ಲಿ ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡಿಕೊಂಡು, ಪ್ರಮೋಷನ್‌ಗಳನ್ನು ಪಡೆದು ಸಾರ್ವಜನಿಕ ಕಾರ್ಯಗಳನ್ನು ಶ್ರದ್ಧೆಯಿಂದ ಮುಗಿಸಿ ನೌಕರಿಯಿಂದ ಎಲ್ಲರಂತೆ ತಾನೂ ನಿವೃತ್ತಿಯಾಗಬಹುದು ಅನ್ನತಕ್ಕ ಆಶೆಯಿಂದ ಜನರು ನೌಕರಿಗೆ ಸೇರುತ್ತಾರೆ. ಆದರೆ ಈ ದಿವಸ ಇಲ್ಲಿ ನಡೆಯುತ್ತಿರುವ ಕೆಲಸ ಕಾರ್ಯವನ್ನು ನೋಡಿದರೆ ಇದು ಹೊಲಸೆದ್ದು, ಧಿಕ್ಕೆಟ್ಟು ನಡೆಯುತ್ತಿದೆ. ಆದರೆ ರಾಷ್ಟ್ರಾದ್ಯಂತವೂ ಒಂದೇ ಪಕ್ಷದ ಆಡಳಿತವಿರುವುದರಿಂದ ಎಲ್ಲಾ ಕಡೆಗಳಲ್ಲಿಯೂ ಹೀಗೆಲ್ಲ ಹೊಲಸಾದ ಆಡಳಿತ ಇದ್ದರೂ, ನಮ್ಮ ಮೈಸೂರು ರಾಜ್ಯದಲ್ಲಿ ಹೊಲಸು ದಿಕ್ಕೆಟ್ಟು ಹೋಗಿರುವಷ್ಟು ಆಡಳಿತ ಬೇರಿನ್ನಾವ ರಾಜ್ಯದಲ್ಲೂ ಆಗಿರುವುದಿಲ್ಲ. ಇದಕ್ಕೆ ಒಂದು ಸಾಮಾನ್ಯವಾದ

ಕಾರಣ ಏನೆಂದರೆ, 1956 ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದಾಗ ಈ ರಾಜ್ಯಕ್ಕೆ 4-5 ಭಾಗಗಳಿಂದ ನೌಕರರು ಬಂದು ಇದಕ್ಕೆ ಸೇರಿರುತ್ತಾರೆಂಬುದು ಒಂದು.

11-30 A.M.

ಕೊಡಗಿನವರು, ಹೈದರಾಬಾದಿನವರು, ಮದ್ರಾಸಿನವರು, ಬೊಂಬಾಯಿನವರು ಬಂದರು. ಒಂದು ಕೆಲಸಕ್ಕೆ ಬೇರೆ ಬೇರೆ ರೀತಿಯ ಕ್ರಮಗಳನ್ನು ಅವರು ಅನುಸರಿಸಿದರು. ಆ ಸಮಯದಲ್ಲಿ ಎಲ್ಲವನ್ನೂ ಸರಿಪಡಿಸಬೇಕಾಗಿತ್ತು. ಆದರೆ ಆ ಕಡೆ ಗಮನವನ್ನೇ ಕೊಡಲಿಲ್ಲ. ನಮ್ಮ ಚೀಫ್-ಸೆಕ್ರೆಟರಿಯವರು ಆ ಕಡೆ ಗಮನವನ್ನು ಕೊಡಲಿಲ್ಲ. ಕ್ಯಾಬಿನೆಟ್ ಅವರು ಸಹ ಗಮನ ಕೊಡಲಿಲ್ಲ. ಈ ವಿಳಂಬ ನೀತಿಯನ್ನೇ ಅನುಸರಿಸಿಕೊಂಡು ಬರುತ್ತಿದ್ದಾರೆ. ಈ ಮಾತನ್ನು ಈ ಸಭೆಯ ಮುಂದೆ 6-7 ವರ್ಷದಿಂದ ಒಂದೇ ಸಮನೆ ಹೇಳುತ್ತಾ ಬಂದಿದ್ದೇನೆ. ಅಗೋ ಆಯಿತು, ಇಗೊ ಆಯಿತು, ಎಂದು ಹೇಳುತ್ತಲೇ ಇದ್ದಾರೆ. ಈ ಅವಧಿಯಲ್ಲಿ ಸಹಸ್ರಾರು ಜನ ರಿಟ್ ಹೋಗಿದ್ದಾರೆ. ಪ್ರಮೋಷನ್ ಇಲ್ಲದೆ, ಸಂಬಳ ಇಲ್ಲದೆ ಮತ್ತಿತರ ಕಾರಣಗಳಿಂದ ಹೋಗಿದ್ದಾರೆ. ಇಲ್ಲಿರುವ ಸದಸ್ಯರುಗಳು ತಮ್ಮ ಸಮಯದ 75 ರಷ್ಟು ಭಾಗವನ್ನು ಈ ಒಂದು ವಿಚಾರಕ್ಕಾಗಿ ಉಪಯೋಗಿಸಿದ್ದಾರೆ. ಇಷ್ಟೊಂದು ಜನ ಹೈಕೋರ್ಟಿಗೆ ರಿಟ್ ಹೋಗಿರುವುದನ್ನು ನೋಡಿದರೆ ನಮ್ಮ ರಾಜ್ಯದ ಆಡಳಿತ ಯಾವ ರೀತಿ ನಡೆದಿದೆ ಎಂಬುದು ಗೊತ್ತಾಗುತ್ತದೆ. ಆರ್ಡಿನೆನ್ಸ್ ವಿಚಾರ ಈ ಸಭೆಯಲ್ಲಿ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಕೆಲವರು ಅನ್ಯಾಯವಾಗಿದೆಯೆಂದು ರಿಟ್ ಹೋಗುತ್ತಾರೆ ಎಂದು ಹೇಳಿದರು. 10-20 ವರ್ಷ ಸರ್ಕಾರದ ಸೇವೆ ಮಾಡಿರುವ ಒಬ್ಬ ಅಧಿಕಾರಿ ಸುಪ್ರೀಮ್ ಕೋರ್ಟಿಗೆ ಹೋಗಬೇಕಾದರೆ ಏನು ಅನ್ಯಾಯವಾಗಿದೆ ಎಂಬುದನ್ನು ನೋಡಬೇಕು ; ಹೋದ ವರ್ಷ ಒಬ್ಬ ಅಧಿಕಾರಿ ಸುಪ್ರೀಮ್ ಕೋರ್ಟಿಗೆ ಹೋಗಿ, ಅವರಿಗೆ ಇಷ್ಟು ಸಂಬಳ ಕೊಡುವುದು ನ್ಯಾಯ ಎಂದು ಮಾಡಿಸಿಕೊಂಡು ಬಂದರು. ಆದರೆ ಸರ್ಕಾರದವರು ಇನ್ನೂ ಸಂಬಳ ಕೊಟ್ಟಿಲ್ಲ. ಏಕೆಂದರೆ ಇವರದ್ದೇ ಒಂದು ಕಾನೂನು, ಇವರದ್ದೇ ಒಂದು ನೀತಿಯಾಗಿದೆ. ಗೌಡ ಹಾಕಿದ್ದೇ ಕೋಳ ಎಂದು ನೀತಿ ಇದೆ. ಅದರಂತೆ ಮನಸ್ಸಿಗೆ ಬಂದಂತೆ ಆಡಳಿತವನ್ನು ನಡೆಸುವುದು ಈ ರಾಜ್ಯದ ಆಡಳಿತದ ರೀತಿ ನೀತಿಯಾಗಿದೆ. ಗ್ರಾಮ ಸೇವಕರಾಗಿ ಕೆಲಸ ಮಾಡುತ್ತಿರುವವರು ಮುಂದೆ ಅಗ್ರಿಕಲ್‌ಚರ್ ಡೆಮಾನ್ಸ್ಟ್ರೇಟರ್ ಕೆಲಸ ಮಾಡಬಹುದು ಎಂದು ಒಂದು ಸರ್ಕುಲರ್ ಹೊರಡಿಸಿದರು. ಎಸ್. ಎಸ್. ಎಲ್. ಸಿ. ಆಗಿರುವ 200 ಜನರನ್ನು ಇಂಟರ್‌ವ್ಯೂ ಮಾಡಿ, ಕೆಲವರನ್ನು ಅಗ್ರಿಕಲ್ಚರಲ್ ಡೆಮಾನ್ಸ್ಟ್ರೇಟರ್ ಕೆಲಸಕ್ಕೆ ನೇಮಿಸಿದರು. ನಂತರ ಯಾರೋ ಒಬ್ಬ ಬಿ. ಎಸ್. ಸಿ. ಮಾಡಿಕೊಂಡು ಅಗ್ರಿಕಲ್ಚರಲ್ ಡೆಮಾನ್ಸ್ಟ್ರೇಟರ್ ಆಗಿದ್ದವನು ಕೋರ್ಟಿಗೆ ರಿಟ್ ಹೋದ. ಕೋರ್ಟಿನವರು ಈ ರೀತಿ ಮಾಡುವುದು ಸರಿಯಲ್ಲವೆಂದು ನೇಮಕಗಳನ್ನು ವಜಾ ಮಾಡಿದರು. ನಂತರ ಇವರನ್ನೆಲ್ಲಾ ಅವರ ಹಿಂದಿನ ಜಾಗಕ್ಕೆ ಹೋಗಿ ಎಂದು ಹೇಳಿದ್ದಾರೆ. ತಾಲ್ಲೋಕ್ ಕಛೇರಿಯಲ್ಲಿ ಕೆಲಸಮಾಡುತ್ತಿದ್ದವನು ಮುನ್‌ಷಿಪ್ ಆಗಿದ್ದಾನೆ. ಕೇವಲ ಸಂಬಳದ ವಿಚಾರಕ್ಕಾಗಿ ಸುಪ್ರೀಮ್ ಕೋರ್ಟಿಗೆ ಹೋಗಿರುವವರು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಮಂದಿ ಇದ್ದಾರೆ.

"Proposal for continuing the services of 158 local candidates on the teaching staff in Government Medical and Dental Colleges;"

ಸರ್ಕಾರ ಜೀವಂತವಿಲ್ಲ ಎನ್ನುವುದಕ್ಕೆ ಇದು ಒಂದು ಸಾಕ್ಷಿ.

ಲೋಕಲ್ ಕ್ಯಾಂಡಿಡೇಟ್ಸ್ ಎಂದು ಬೇರೆ ಇದೆ. ಡಿಸ್ಟ್ರಿಕ್‌ಬೋರ್ಡ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬನು ರಿಟೈರ್ ಆಗುವವರೆಗೂ ಲೋಕಲ್ ಕ್ಯಾಂಡಿಡೇಟ್ ಆಗಿಯೇ ಇದ್ದ. ಚೀಫ್ ಸೆಕ್ರೆಟರಿ ಇದ್ದಾರೆ, ಕಂಬ ಕಂಬಕ್ಕೆ ಒಬ್ಬೊಬ್ಬ ಸೆಕ್ರೆಟರಿ ಇದ್ದಾರೆ. ಡೆಪ್ಯುಟಿ ಸೆಕ್ರೆಟರಿಗಳಿದ್ದಾರೆ, ಅಂಡರ್ ಸೆಕ್ರೆಟರಿಗಳಿದ್ದಾರೆ, ಈ 18-20 ವರ್ಷಗಳಲ್ಲಿ 18 ಬಾಬುಗಳಿದ್ದುದು 69 ಬಾಬುಗಳಾಗಿವೆ. ಇವರ ಕೈಕೆಳಗೆ ಕೆಲಸ ಮಾಡುವವರು ಬೇಕಾದಷ್ಟು ಜನ ಇದ್ದಾರೆ. ತಮ್ಮ ತಮ್ಮ ಇಲಾಖೆಗಳು ಸುಸೂತ್ರವಾಗಿ ನಡೆಯಬೇಕಾದರೆ ಯಾವ ರೀತಿ ಆಡಳಿತ ನಡೆಸಬೇಕೆಂಬುದು ಈ ಅಧಿಕಾರಿಗಳಿಗೆ ಗೊತ್ತಿರುವುದಿಲ್ಲ. ಪ್ರತಿಯೊಬ್ಬ ಅಧಿಕಾರಿಯೂ ಸಹ ಉಪಮಂತ್ರಿಗಳು ಕರೆದರೂ ಸಹ ಹೋಗುತ್ತಾರೆಂದು ಕಾಣುತ್ತದೆ. ಸಣ್ಣ ನೀರಾವರಿ ಮಂತ್ರಿಗಳು ಎಲ್ಲಾ ಅಧಿಕಾರಿಗಳನ್ನೂ ಕರೆಸಿ, ಅದು ಏನಾಯಿತು, ಇದು ಏನಾಯಿತು ಎಂದು ಕೇಳಿ, ಕೊನೆಗೆ ಆನೆಗಲ್ಲಿನ ರಿಪೋರ್ಟ್ ಸರಿಮಾಡಿ ಎಂದು ಹೇಳುತ್ತಾರೆ. ನಾವುಗಳು ಯಾರಾದರೂ ಈ ಸೆಕ್ರೆಟರಿಗಳನ್ನು ನೋಡುವುದಕ್ಕೆ ಹೋದರೆ, ಅವರು ಮೀಟಿಂಗ್‌ನಲ್ಲಿದ್ದಾರೆ ಎಂದು ಹೇಳುತ್ತಾರೆ. ಯಾವಾಗಲೂ ಮೀಟಿಂಗ್‌ನಲ್ಲಿಯೇ ಇರುತ್ತಾರೆ. ಆ

(ಶ್ರೀ ಎಸ್. ಗೋಪಾಲ ಗೌಡ)

ಮೀಟಿಂಗ್‌ನಲ್ಲಿ ಏನಾಯಿತು ಎನ್ನುವುದು ಯಾರಿಗೂ ಗೊತ್ತಿಲ್ಲ. ಒಂದು ಸರ್ಕ್ಯುಲರ್ ಹೊರಡಿಸುವುದು, ಅದು ತಪ್ಪಾದರೆ ಇನ್ನೊಂದು ಸರ್ಕ್ಯುಲರ್ ಹೊರಡಿಸುವುದು, ಇದು ಅಠಾರ ಕಛೇರಿಯಲ್ಲಿ ನಡೆಯುತ್ತಿರುವ ಕೆಲಸ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಇದುವರೆಗೂ ಯಾರಿಗೂ ಸಾಮರ್ಥ್ಯವಾಗಿಲ್ಲ. ಸರ್ಕಾರ ಎಂದರೇನು ? ಈ ಪ್ರಶ್ನೆಯನ್ನು ನಾವು ಕೇಳಬೇಕಾಗುತ್ತದೆ. ಬೇರೆ ಏನು ಕೆಲಸ ಸರಿಯಾಗಿ ಮಾಡಿದ್ದಾರೆ ಎಂದು ಕೇಳಬೇಕಾಗುತ್ತದೆ. ಮಾಡುವ ಕೆಲಸವನ್ನು ಸರಿಯಾಗಿ ಮಾಡದಿದ್ದರೆ ಈ ಅಧಿಕಾರಿಗಳು ಇಲ್ಲಿ ಏತಕ್ಕೆ ಇದ್ದಾರೆ ಎಂದು ಕೇಳುತ್ತೇನೆ. 158 ಜನ ಲೋಕಲ್ ಕ್ಯಾಂಡಿಡೇಟ್ಸ್ :

"The Commission regretted their inability to give their concurrence in the absence of any rules enabling either the Commission to give such concurrence or the Government to appoint local candidatvs on clear vacancies earmarked for direct recruitment."

ಎಂದು ಎಲ್ಲಾ ವರದಿ ಕೊಡುವುದು. ಇವರು ಹೀಗೆ, ಅವರು ಹಾಗೆ ಎಂದು. ಇವರಿಬ್ಬರ ಜಗಳದಲ್ಲಿ ಕೂಸು ಬಡವಾಯಿತು ಎನ್ನುವಹಾಗೆ, ಸರ್ಕಾರಿ ಸೇವೆಗೆ ಸೇರುವವರ ಭವಿಷ್ಯವನ್ನು ನಿರ್ನಾಮ ಮಾಡುತ್ತಾರೆ.

ಇನ್ನೂ ಒಂದು ಉದಾಹರಣೆ ಇದೆ, ಡೈರಿ ಪ್ರಾಜೆಕ್ಟ್‌ಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದರು. ಮನಸ್ಸಿಗೆ ಬಂದರೆ ಯಾರನ್ನು ಬೇಕಾದರೂ ನೇಮಕ ಮಾಡಬಹುದು. ಅವರನ್ನು ನೇಮಕ ಮಾಡಿದ್ದು ತಪ್ಪು ಎಂದು ಹೇಳಿದರೂ ಕೂಡ ಸರ್ಕಾರದವರು ಏನೂ ಮಾಡಲಿಲ್ಲ. ಅವರು ಎರಡು ವರ್ಷದಿಂದ ಮುಂದುವರೆಯುತ್ತಿದ್ದಾರೆ. ಈ ವರದಿಗಳನ್ನೆಲ್ಲಾ ಚರ್ಚೆ ಮಾಡಿ ನಮ್ಮ ಸಲಹೆಗಳನ್ನು ಕೊಟ್ಟರೆ ಅದನ್ನು ಯಾರೂ ಕೇಳುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಶಾನುಭೋಗರು ಪಟೇಲರ ಜಾಗಕ್ಕೆ ಹೊಸದಾಗಿ ನೇಮಕ ಮಾಡಿರುವವರಿಗೆ 3—4 ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ಹಳೆಯ ಶಾನುಭೋಗರು ಹೊಸಬರಿಗೆ ಅವರ ದಫ್ತರ್‌ಗಳನ್ನು ಕೊಟ್ಟಿಲ್ಲ. ಸರ್ಕಾರ ಇದೆಯೋ ಎನ್ನುವುದು ಅರ್ಥವಾಗುತ್ತಿಲ್ಲ. ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳ ಚುನಾವಣೆಗಳಿಂದ ಸರ್ಕಾರದವರಿಗೆ ಅನುಕೂಲವಾಗಿಲ್ಲವೆಂದು ಅದನ್ನು ನಿಲ್ಲಿಸಿದರು. ಇನ್ನು ಈ ಪಂಚಾಯಿತಿಗಳಿಗೆ ಬೇಕಾದ ಕಾರ್ಯದರ್ಶಿಗಳನ್ನು ಟ್ರೈನ್ ಮಾಡುತ್ತೇವೆ, ಅದಕ್ಕೆ 5 ಸಾವಿರ ಜನ ಬೇಕು ಎಂದು ಹೇಳಿದರು. ಆದರೆ ಅವರಿಗೆ ಕೊಡುವ ಸಂಬಳ ಕೇವಲ 80 ರೂಪಾಯಿಗಳನ್ನೂ ಕೂಡ ಕೊಡುವುದಕ್ಕೆ ಇವರಿಗೆ ಆಗಿಲ್ಲ.

ಇನ್ನು ವಿದ್ಯಾಭ್ಯಾಸ ಇಲಾಖೆಯಲ್ಲಿ ಎರಡು ಮೂರು ತರಹ ಅಕ್ರಮ, ಅನ್ಯಾಯದ ಆರ್ಡರ್‌ಗಳನ್ನು ಮಾಡಿದ್ದಾರೆ. ಈ ಅಕ್ರಮವನ್ನು ಮುಚ್ಚುವುದಕ್ಕೆ ಮತ್ತೊಂದು ಅಕ್ರಮದ ಆರ್ಡರ್, ಆಮೇಲೆ ಮತ್ತೊಂದು ಸ್ಪೆಷಲ್ ಆರ್ಡರನ್ನು ಹೊರಡಿಸಿದ್ದಾರೆ. ಒಬ್ಬರನ್ನು ಅಕ್ರಮವಾಗಿ ಮೇಲಕ್ಕೇರಿಸುವುದು, ಗುಮಾಸ್ತನಾಗಿರುವವನನ್ನು ಸೂಪರಿಂಟೆಂಡೆಂಟರನ್ನಾಗಿಯೋ ಅಥವಾ ಪ್ರೊಫೆಸರನ್ನಾಗಿಯೋ ಹೀಗೆ ಏನಾದರೂ ಮಾಡುವುದು, ಆಮೇಲೆ ಯಾರಾದರೂ ಅದು ತಪ್ಪಾಯಿತು ಎಂದು ಕೋರ್ಟಿಗೆ ಹೋದಾಗ ಇನ್ನೊಂದು ಸ್ಪೆಷಲ್ ಆರ್ಡರ್ ಹೊರಡಿಸುವುದು. ಇವರು ಇರುವುದು ಇಂತಹ ಆರ್ಡರ್ ಹೊರಡಿಸುವುದಕ್ಕೇ ಎಂದು ಕಾಣುತ್ತದೆ. ವರದಿಯ 10ನೇ ಪುಟದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಹೀಗಿದೆ :

"The Commisiion were therefore of the opinion that Government had, in the present case, exercised the powers under Article 309 of the Constitution of India that vest only in the Governor and had passed orders contrary to the rules of recruitment and for this reason the order in question was not legal or constitutional and informed the Government accordingly".

ಇವರ ಕಡೆಯವರಿಗೆ ಪೆಟ್ರೋಲ್ ಬಂಕ್ ಕೊಡಬೇಕು, ಇವರ ಕಡೆಯವರಿಗೆ ಚುನಾವಣೆಗೆ ಟಿಕೆಟ್ ಬೇಕು, ಮಸ್ತಿ ಇನ್ನೊಂದು ಟರ್ಮ್ ಮುಂದುವರಿಯಬೇಕು ಎಂದು ಮಾಡುತ್ತಿದ್ದಾರೆ. ಇದನ್ನು ಹೇಳುವವರೆಗೇ ಅಸಹ್ಯ. ಆದರೂ ಇವೆಲ್ಲಾ ಸಾರ್ವಜನಿಕರ ಗಮನಕ್ಕೆ ಬರುತ್ತದೆ.

ಇಂತಹ ಅಸಹ್ಯ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರಿಗೆ ಎಲ್ಲವೂ ಬೇಕು. ಇಂತಹ ಪರಂಪರೆಯನ್ನು ಇವರು ಈ 20 ವರ್ಷಗಳಲ್ಲಿ ಈ ದೇಶದಲ್ಲಿ ಬೆಳೆಸಿಕೊಂಡು ಬಂದಿದ್ದಾರೆ. ತಮಗೊಂದು ಅವಸಾನ ಕಾಲ ಹತ್ತಿರ ಬರುತ್ತಿದೆ. ಆದರೆ ದೇಶಕ್ಕೆ ಅವಸಾನ ಕಾಲ ಬರುವಂತೆ ಮಾಡಿದ್ದಾರೆಂದು ನನಗೆ ದುಃಖ. ಎಲ್ಲಿ ವಿಶ್ವಾಸ ಉಳಿಯಬೇಕೋ ಅಲ್ಲಿ ಅದು ಉಳಿಯದಿದ್ದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಬಗ್ಗೆ ಏಕೆ ಸುಮ್ಮನೆ ಹೇಳಬೇಕು ? ನಮಗೆ ಹೇಳಿ ಅದರಿಂದ ಏನು ಸಿಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಹತ್ತಿರ ಇನ್‌ಫ್ಲುಯನ್ಸ್ ನಡೆಯುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ಇನ್‌ಫ್ಲುಯನ್ಸ್ ನಡೆಯುವುದಿಲ್ಲವೆಂಬುದು ನಮಗೆ ಗೊತ್ತು. ಪ್ರಭಾವಶಾಲಿಗಳಾಗಿಲ್ಲದೆ ಇದ್ದರೆ ಏನೂ ಸಿಗುವುದಿಲ್ಲವೆಂಬ ನಿರಾಶೆಗೆ ನಿಮ್ಮ ಕಾರ್ಯನೀತಿಯೇ ಕಾರಣ. ಈಗ ಸಮಯ ಹೆಚ್ಚಿಗೆ ಇಲ್ಲದೆ ಇರುವುದರಿಂದ ನಾನು ಹೆಚ್ಚಾಗಿ ಹೇಳುವುದಿಲ್ಲ. ಇದರಲ್ಲಿರತಕ್ಕ ಅನೇಕ ಇರೆಗ್ಯುಲಾರಿಟೀಸನ್ನು ನನ್ನ ಸ್ನೇಹಿತರು ಹೇಳಿದ್ದಾರೆ. ದೇಶದ ಹಿತದೃಷ್ಟಿಯಿಂದ ಒಂದು ಮನವಿ ಮಾಡುತ್ತೇನೆ. ತಮಗೆ ಇರತಕ್ಕ ಅತ್ಯಲ್ಪ ಕಾಲದಲ್ಲಿ ಏನಾದರೂ ಮಾಡುವುದಾದರೆ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮತ್ತು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಕೆಲವು ಇಲಾಖೆಗಳಲ್ಲಿ ಇನ್ನೂ ಮಾಡಿಲ್ಲ. ಅದನ್ನು ಮಾಡಬೇಕು. ಪ್ರಾಂತ ಮತ್ತು ಜಿಲ್ಲಾ ಮಟ್ಟದಲ್ಲಿ ರೆಕ್ರೂಟ್‌ಮೆಂಟ್ ಆಗಿರುವವರಿಗೆ ಖಾಯಂ ಮಾಡದೆ ಅವರನ್ನು ಅತಂತ್ರಮಾಡಿ ಒಂದು ದೊಡ್ಡ ಅನ್ಯಾಯಕ್ಕೆ ಗುರಿಮಾಡಿದ್ದೀರಿ. ಅನೇಕರಿಗೆ ಈಗಾಗಲೇ 27 ಮುಗಿದು 28 ವರ್ಷಗಳಾಗಿರುತ್ತವೆ. ಅವರು ಮುಂದೆ ಹೋಗುವ ಹಾಗೆಯೇ ಇಲ್ಲ. ಸಹಸ್ರಾರು ಬಡ ಜನರ ಭವಿಷ್ಯವನ್ನು ಹಾಳು ಮಾಡಿದ್ದೀರಿ. ನೀವು ಮಾಡಿದಂಥ ತಪ್ಪುಗಳನ್ನು ಸರಿಪಡಿಸಿ ಜಾಗ ತೆರವು ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಪಬ್ಲಿಕ್ ಸರ್ವಿಸ್ ಕಮಿಷನ್ನಿನ 1963–64 ಮತ್ತು 1964-65 ನೇ ಸಾಲಿನ ವರದಿಗಳ ಮೇಲೆ ಮಾನ್ಯ ಸದಸ್ಯರು ಚರ್ಚೆ ಮಾಡುತ್ತಿರುವಾಗ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ, ಆ ಟೀಕೆಗಳಲ್ಲಿ ಕೆಲವು ಟೀಕೆಗಳು ಬಹಳ ಉತ್ಪ್ರೇಕ್ಷೆಯಿಂದ ತುಂಬಿದ್ದಾಗಿವೆ, ಇನ್ನು ಕೆಲವು ಟೀಕೆಗಳು ಸಂಪೂರ್ಣವಾಗಿ ನಿರಾಧಾರವಾದಂಥ ಟೀಕೆಗಳಾಗಿವೆ. ನಿಜವಾಗಿಯೂ ಬಹಳ ದುರದೃಷ್ಟಕರವಾದ ವಿಚಾರ, ಅಂದರೆ ಈ ಸಭೆಯಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರ ಮೇಲೆ ವೈಯಕ್ತಿಕವಾದಂಥ ಕೆಲವು ಟೀಕೆಗಳನ್ನು ಮಾಡಿರುವುದು. ಇದು ಈ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿರತಕ್ಕ ಅಧ್ಯಕ್ಷರೇ ಆಗಲೀ ಅಥವಾ ಅಧಿಕಾರೇತರ ಸದಸ್ಯರೇ ಆಗಲಿ...

Sri S. SIVAPPA.—Point of order, Sir. This Public Service Commission belongs to the Chief Minister's portfolio and the Chief Minister is in Headquarters. He is responsible to the Assembly when the Assembly is in session and when he is present in the Headquarters, I do not see why the Hon'ble Minister for Finance is replying on behalf of the Chief Minister. The Chief Minister is ignoring this House and he is present in the upper House for the same purpose. His primary duty is that he should reply to this Assemply and he should have deputed his lieutenants to the other House. I request the Chair to call the Chief Minister to be present here so that he can reply.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

Sri RAMAKRISHNA HEGDE.—The Chief Minister cannot be present in both the Houses simultaneously.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ.—ಮುಖ್ಯ ಮಂತ್ರಿಗಳು ಏತಕ್ಕೆ ಇರಬೇಕು ಎಂದು ಶ್ರೀ ಶಿವಪ್ಪನವರು ಹೇಳುತ್ತಾರೆಂದರೆ, ಅದು ಅವರಿಗೆ ಸಂಬಂಧಪಟ್ಟ ಖಾತೆ. ಅದಕ್ಕೋಸ್ಕರ ಅವರು ಇರಬೇಕು. ಹಣಕಾಸಿನ ಸಚಿವರು ಉತ್ತರ ಹೇಳಬಾರದು ಎಂದು ನಾನು ಅಡ್ಡಿಮಾಡುವುದಿಲ್ಲ. ಸರ್ವಿಸ್ ಕಮಿಷನ್ ಅವರ ಅಧೀನ. ಹಣಬೇಕಾದಾಗ ಮಾತ್ರ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗುತ್ತದೆ. ನಾವು ಹೇಳಿರತಕ್ಕ ಟೀಕೆ ಟಿಪ್ಪಣಿಗಳು ಸರಿಯೇ ತಪ್ಪೇ, ಆಪಾದನೆಗಳು ಸರಿಯೇ, ತಪ್ಪೇ ಎಂದು ಹೇಳುವುದು ಮುಖ್ಯಮಂತ್ರಿಗಳ ಅವರ ಕರ್ತವ್ಯ.

Mr. DEPUTY SPEAKER.—Let us not go into all these things.

Sri C. J. MUCKANNAPPA.—I agree. I do not dispute that there is joint responsibility. I concede that point. But what we want is that the Chief Minister should reply. Because the Public Service Commission is under his direct charge. So, I request the Deputy Speaker to call the Chief Minister to reply because it is proper. It is only proper that the Chief Minister alone should reply to the allegations, charges and counter-charges made against the Public Service Commission Members as well as the Service Commission. Otherwise, it will be simply our talking something and the Government saying something and when the time is over, your adjourning the House thereafter. We have told very serious things about the Public Service Commission, that they are indulging themselves in trading. Let the Government reply on Monday.

Sri S. SIVAPPA.—It is in the interest of healthy convention that when the Chief Minister is present and he is present in the Upper House for the same purpose of replying to the debate on the report of the Public Service Commission, that he should reply to the debate here. I want to know whether it is not the first duty of the Chief Minister to be present here and reply to the debate in this House which has elected members and when he is responsible to this House. If the Chief Minister is not in Station, I do agree that the Finance Minister or any of his colleagues can reply. But the Chief Minister is present and he is present in the other House for the same purpose. He wants to reply to the debate on Public Service Commission Report in the Legislative Council. Which is more important to the Chief Minister, I want to ask. Is it Legislative Assembly or Legislative Council ?

Mr. DEPUTY SPEAKER.—That House is also equally important.

Sri D. DEVARAJ URS.—I cannot understand members saying that there is comparative difference in the degree of importance between both Houses.

Sri S. SIVAPPA.—I do not mind the discussion being postponed to to-morrow.

Mr. DEPUTY SPEAKER.—There is a Minister and he is replying.

Sri C. J. MUCKANNAPPA.—Not for a moment I will question the joint responsibility.

Mr. DEPUTY SPEAKER.—There is no point of order.

Sri ANNA RAO GANAMUKHI (Afazalapur).—There is point of order. How is it not a point of order ? When any Member raises a point of order, you must decide it.

Mr. DEPUTY SPEAKER.—I am sorry the member is not attentive. There is no point of order. The attention of the House was drawn that the Chief Minister is in station and he is not attending the House.

Sri ANNARAO GANAMUKHI.—We must know the reason for his not attending this House. How can he ignore this House ? That is the question.

Sri K. LAKKAPPA.—I raise a point of order. of course joint responsibility is there......

Mr. DEPUTY SPEAKER.—Under what rule is the member raising the point of order ?

Sri K. LAKKAPPA.—The point of order is in respect of procedure and convention. The Hon'ble Members have made allegations with respect to the functioning of the Public Service Commission and the Chief Minister who appoints the Public Service Commission on the recommendation of the Governor is directly responsible and he should be present in the House. First of all, he has not represented to the Speaker regarding the reasons of his absence in this House. He is present in station to-day. Further, the allegations made by the Members with respect to the Public Service Commission involves an answer by the Chief Minister because the Chief Minister is involved in the appointment of the Chairman and he is allowing the Chairman to have trade through the Chairman's son under the very nose of Vidhana Soudha and that matter was also raised on several occassions. These things cannot be convinced by the Hon'ble Finance Minister's reply. Therefore it is obligatory on the part of the Chief Minister to participate in the debate here and he should be summoned and it is a convention that he should reply to the several charges made by the Members here.

Mr. DEPUTY SPEAKER.—The members is diverting on so many things. His point of order is only that the Chief Minister should have been present here to reply the motion.

Sri K. LAKKAPPA.—Even though there is joint responsibility, the criticism levelled against the Public Service Commission involves Chief Minister's reply because the Chief Minister is directly responsible for the appointment of its Chairman. The present Chairman who is supposed to have been elected from my constituency just resigned and he has been appointed to that place. The Chief Minister should reply in the interest of public as to what the Public Service Commission is doing.

Sri ANNARAO GANAMUKHI.—Let me atleast state the reasons for the point of order and then you may give your ruling. You have not heard anything about the point of order itself. Now this report has come up for discussion with the concurrence of the Government and there is a practice even in Lok Sabha that if the Minister concerned who deals with the subject is absent, then his Deputy who deputises for him and who is in the know of things answers.

Sri RAMAKRISHNA HEGDE.—I can give the latest instance. Sri Fakruddin Ahamed was unwell and day before yesterday Sri Chagla who is Ex-Minister for Education replied on his behalf.

Sri ANNARAO GANAMUKHI.—If any Minister is unwell or if he has gone outside on any urgent business, then the Speaker is informed and certain other Minister deputises for him. The question is this subject has come up here with the concurrence of the Government itself and the Chief Minister is present not in this House but in the other House. The question arises whether any Minister because of joint responsibility can deputise for him. I should say this cannot be allowed. The question is

(SRI ANNA RAO GANAMUKHI)

when the Minister is present in the City and he is attending to the work in the other House, whether he should prefer this House or he should go to the other House. If you are of the opinion that the Upper House has preference in this respect, then any Minister can give the reply. Such a position cannot be considered at all. We should lay down certain conventions. Yesterday it so happened that when the Local Development Minister was not present here and when the Chief Minister was replying on his behalf, as soon as that Minister arrived, the Chief Minister kept quiet. That was the position. I think Sir, he must give respect to this House because this is the House where representatives of the people are directly represented.

Mr. DEPUTY SPEAKER.—It is better not to enter into all those delicacies. Now no point of order remains since the Hon'ble Chief Minister has come.

(At this stage the Chief Minister entered the Chamber)

Sri K. LAKKAPPA —We want the Chief Minister to reply now that he has come and not the Finance Minister.

Mr. DEPUTY SPEAKER.—No member can prevent the Minister from replying when he has already commenced.

12-00 NOON.

Sri K. LAKKAPPA.—Now the Chief Minister has come to the House. Let him reply.

Mr. DEPUTY SPEAKER —The other Minister is also entitled to have his say. Let him have his say.

Sri C. J. MUCKANNAPPA.—Yesterday the Chief Minister introduced a Bill in this House when the portfolio Minster was not present, but the moment the concerned Minister came to the House immediately the Chief Minister gave the entire charge of the Bill to that Minister. Similarly, it is true that the Finance Minister has commenced, but now that the Chief Minister has arrived here he should give the reply. So, I request the Chief Minister through you to take over the reply as it is his right.

Mr. DEPUTY SPEAKER.—You are aware there are so many Departments and several Ministers are dealing with them and so if one Minister intervenes and if he has got to say something you cannot prevent him. After that if you want to hear the Chief Minister then he may also reply.

Sri K. LAKKAPPA.—The reply should be by the Chief Minister.

Mr. DEPUTY SPEAKER.—It is not proper to say that only the Chief Minister should reply. That is not correct.

Sri C. J. MUCKANNAPPA.—Is he intervening now ?

Sri RAMAKRISHNA HEGDE.—Sir, I would like to say a word about the two points raised here. One is that the Chief Minister is in headquarters; he is present in the Upper House, why did you choose the Upper House in preference to the Lower House. There is no question of any preference. Both the Houses are equal in their privileges and right except in one or two matters which are specifically laid down in the Constitution. Therefore, we cannot say which House is more important and which House is less important. I would like to submit to the Hon'ble Members for their information that the debate was closed in the Upper House at 11 O'clock and the Chief Minister started giving his reply at 11 O'clock and so he cannot come here in the middle as soon as the debate was closed here to give his reply.

The other point raised was that the concerned Minister is present in the Upper House and so how can another Minister represent that Minister or handle that subject in this House. I can give another instance here when there was no objection raised by Hon'ble Members. There is also a convention. When the Surcharge on Land Revenue Bill was to be piloted, it was I who piloted it even though the concerned Minister was the Revenue Minister.

Sri S. SIVAPPA.—Even then objection was raised.

Sri RAMAKRISHNA HEGDE.—At that time objection was not raised. Even if it was raised, it was overruled on the ground that it was joint responsibility and any Minister can act on behalf of any other Minister.

Sri S. SIVAPPA.—With due respect to the Chair, I want to submit that we have to build healthy conventions here. Each Minister is in charge of a particular protfolio. If any Minister owing to illness or absence otherwise from headquarters is unable to be present, then another Minister can be in charge of the portfolio in the House, but if the concerned Minister is present in the House then it is in the interest of healthy convention and parliamentary democracy that the Minister in charge of the portfolio must be responsible for the debate in the House and reply to the debate and some other Minister cannot act on his behalf. Otherwise it will be an encroachment upon the portfolio of another Minister and there will be an inference that the particular portfolio Minister is incapable of answering the criticism and that will be a reflection on the Minister. In order to avoid all that the portfolio Minister himself should be responsible and he should reply to the debate. The Chief Minister is in charge of the Public Service Commission and it is his right to reply. I request the Chief Minister to intervene and reply to the debate.

† **Sri S. NIJALINGAPPA.**—There is not much meaning or content in what the Opposition say. In fact, I was busy with the same matter in the Upper House. When I am in the Upper House, I cannot be present in both the Houses. So I had requested the Minister for Finance to be in charge of this here. When there is undivided responsibility I do not understand why he should not reply to the debate? Leave that alone, let him say what he has to say and if anything remains I will reply.

Sri C. J. MUCKANNAPPA.—If he says that he is not replying to the debate and he is only intervening, then we have no objection. We have to build up a convention that the Minister in charge should reply to the debate and not any other Minister.

Sri ANNARAO GANAMUKHI.—When the Chief Minister is present, if a non-portfolio Minister replies, it would be a reflection upon the Chief Minister. So, if the Chief Minister wants to take 15 minutes for going through the points, let him take and then begin his reply. But it would not be advisable for any other Minister to reply.

Mr. DEPUTY SPEAKER.—The Finance Minister is only intervening in the debate.

Sri K. LAKKAPPA.—In that case, the debate is not closed and our right to participate in the debates still remains.

Mr. DEPUTY SPEAKER.—Let him finish first.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ನಾನು ಈ ಚರ್ಚೆಯಲ್ಲಿ ಮಾಡಿದಂತಹ ಟೀಕೆಯನ್ನು ಪ್ರಸ್ತಾಪಿಸುತ್ತಾ ನಾನು ಹೇಳುತ್ತಿದ್ದೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ಮಾಡಿದಂತಹ ಕೆಲವು ಟೀಕೆಗಳು ಉತ್ಪ್ರೇಕ್ಷೆಯಿಂದ ಕೂಡಿದಂಥಾದ್ದು. ಇನ್ನು ಉಳಿದ ಟೀಕೆಗಳು ಸಂಪೂರ್ಣವಾಗಿ ನಿರಾಧಾರವಾದವುಗಳು.

ಇನ್ನು ಚರ್ಚೆಯು ಕಾಲಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸದಸ್ಯರನ್ನು ವೈಯಕ್ತಿಕವಾಗಿ ದೂರತಕ್ಕಂಥಾದ್ದು ಯೋಗ್ಯವಲ್ಲ. ಮತ್ತು ಅವರ ಘನತೆಗೂ ನಮ್ಮ ಘನತೆಗೂ ತಕ್ಕದ್ದಲ್ಲ ಎಂದು ನನ್ನ ನಮ್ರವಾದ ಅಭಿಪ್ರಾಯ. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಮಾಡಿದಂಥಹ ಕೆಲಸ ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಹಾಗೂ ಅದರ ಸದಸ್ಯರ ನಡುವೆ ಇದ್ದಂತಹ ಸಂಬಂಧ ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಅಭಿಪ್ರಾಯಕ್ಕೆ ಸರ್ಕಾರದವರು ಎಷ್ಟರಮಟ್ಟಿಗೆ ಗೌರವವನ್ನು ಕೊಟ್ಟಿದ್ದಾರೆ, ಮತ್ತು ಅವರ ಅಭಿಪ್ರಾಯದಲ್ಲಿ ಅನಪೇಕ್ಷವಾಗಿ ಸರ್ಕಾರದವರು ಹಸ್ತಕ್ಷೇಪ ಮಾಡಿದ್ದಾರೆಯೇ ಹೇಗೆ; ಹಾಗೆ ಸರ್ಕಾರದವರು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಕೆಲಸದಲ್ಲಿ ಹಸ್ತಕ್ಷೇಪ ಮಾಡಿದ್ದರೆ ಅದು ಆಧಾರ ಸಹಿತವೇ ಅಥವಾ ಆಧಾರ ರಹಿತವೇ ಎಂಬ ವಿಚಾರವನ್ನು ಇಲ್ಲಿ ಚರ್ಚೆ ಮಾಡಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿರುವ ಸದಸ್ಯರುಗಳು ರಾಜಕೀಯದಲ್ಲಿದ್ದಂತಹವರು, ರಾಜಕೀಯ ಹವ್ಯಾಸಗಳಲ್ಲಿ ಮಹತ್ವಾಕಾಂಕ್ಷೆಗಳನ್ನು ಇಟ್ಟು ಕೊಂಡಿರುವವರು, ಚುನಾವಣೆಗಳಲ್ಲಿ ಸೋತು ಇಲ್ಲಿಗೆ ಬಂದಿರುವರು ಎಂದು ಇಲ್ಲಿ ಟೀಕೆಗಳನ್ನು ಮಾಡಿದರು. ಈ ರೀತಿಯಾದ ಟೀಕೆಗಳನ್ನು ಮೊದಲು ಬಾರಿಗೆ ಇಲ್ಲಿ ಮಾಡುತ್ತಿಲ್ಲ. ಹಿಂದೆ ಇಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ರಿಪೋರ್ಟು ಬಂದಿದ್ದಾಗಲೂ ಇದೇ ರೀತಿ ಚರ್ಚೆ ಮಾಡಿ ಇದೇ ರೀತಿಯಾದ ಟೀಕೆಗಳನ್ನು ಮಾಡಿದ್ದಾರೆ. ಯಾವಾಗ ಒಂದು ಸಲ ಟೀಕೆಯನ್ನು ಮಾಡಿದ ಮೇಲೆ ಅದನ್ನೇ ಪುನಃ ಪುನಃ ಸರಕಾರದ ವತಿಯಿಂದ ಉತ್ತರ ಕೊಟ್ಟಿದ್ದರೂ ಕೂಡ ಪುನಃ ಟೀಕೆಗಳನ್ನು ಇಲ್ಲಿ ಮಾಡುವುದರ ಅಗತ್ಯವೇನು ಎನ್ನುವುದು ಉದ್ದೇಶ ನನಗೆ ತಿಳಿಯುತ್ತಿಲ್ಲ. ಈಗ ರಾಜಕೀಯ ದಲ್ಲಿದ್ದು ಚುನಾವಣೆಯಲ್ಲಿ ಸೋತ ಮಾತ್ರಕ್ಕೆ ಅವರು ರಾಜಕೀಯಕ್ಕೆ ಯೋಗ್ಯ ವ್ಯಕ್ತಿಯಲ್ಲ ಎಂದು ಹೇಳುವುದು ಸರಿಯಲ್ಲ. ಅವರವರ ಅರ್ಹತೆ ಅಥವಾ ಯೋಗ್ಯತೆಗಳಿಗನುಸಾರವಾಗಿ, ಅವರು ಉನ್ನತ ಹುದ್ದೆಗಳಲ್ಲಿ ಇರಲು ಅರ್ಹರಾಗಿರುತ್ತಾರೆ. ಒಮ್ಮೆ ಚುನಾವಣೆಗೆ ನಿಂತು ಯಾವುದೋ ಕಾರಣಕ್ಕಾಗಿ ಸೋತಿದ್ದ ಮಾತ್ರಕ್ಕೆ ಅವರು ಅರ್ಹರಲ್ಲ ಎಂದು ನೋಡುವುದು ಸರಿ ಕಾಣುವುದಿಲ್ಲ. ಒಬ್ಬ ವ್ಯಕ್ತಿಯ ಅರ್ಹತೆ ಅವರು ಚುನಾವಣೆಗಳಲ್ಲಿ ನಿಂತು ಸೋಲುವುದರಿಂದ ಎಂದು ಅಳೆಯುವುದು ಸರಿಯಾಗುವುದಿಲ್ಲ. ಅದು ಅವರವರ ಅಂತಸ್ತು ಹಾಗೂ ಸ್ಥಾನ ಮಾನಗಳಿಗೆ ಅನುಗುಣವಾಗಿರು ತ್ತದೆ. ಈಗ ಅವರು ಇರತಕ್ಕ ಹುದ್ದೆಗಳಲ್ಲಿ ಅವರು ಜವಾಬುದಾರಿಗಳನ್ನು ಹೊರಬಲ್ಲರು ಎಂದು ಅವರುಗಳನ್ನು ನೇಮಕ ಮಾಡಲಾಗಿದೆ. ಇದರಲ್ಲೇನೂ ಅಂತಹ ತಪ್ಪು ಕಾಣುವುದಿಲ್ಲ.

ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಇಲ್ಲಿ ಬಹಳ ನಿಧಾನವಾಗಿ ಮಾತನಾಡಿದರು. ಅವರು ನಿಧಾನವಾಗಿ ಮಾತನಾಡುತ್ತಿದ್ದರೂ ಅವರ ಮಾತು ಬಹಳ ತೀಕ್ಷ್ಣವಾಗಿತ್ತು. ನಿಧಾನವಾಗಿ ಮಾತನಾಡಿದರೂ ಅದರಲ್ಲಿ ಬಹಳ ತೀಕ್ಷ್ಣತೆ ಬಹುವಾಗಿತ್ತು ಎಂದು ನಾನು ಇಲ್ಲಿ ಹೇಳುತ್ತೇನೆ. ಅವರು ಮಾಡಿರುವ ಟೀಕೆಗಳನ್ನು ನೋಡಿದರೆ ಅವರು ಒಂದೊಂದು ಸಲ ಸ್ವಲ್ಪ ಅಡ್ಡ

ದಾರಿಯಲ್ಲಿ ಹೋಗುತ್ತಾರೆ ಎಂದು ನಾನು ಇಲ್ಲಿ ಹೇಳಿದರೆ ಅವರು ಇದನ್ನು ಇಲ್ಲಿ ತಪ್ಪು ಎಂದು ತಿಳಿದುಕೊಳ್ಳಲಾರರು. ಅವರು ತಮ್ಮ ಭಾಷಣ ರಭಸದಲ್ಲಿ ಒಂದೇ ಮಾತಿನಲ್ಲಿ ಹೇಳಿದರು, ನಮ್ಮ ಮೈಸೂರು ರಾಜ್ಯದಲ್ಲಿ ಆಡಳಿತ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ ಎಂದು, ಇಡೀ ಇಂಡಿಯಾ ದೇಶದಲ್ಲಿ ಈ ತರಹ ಹದಗೆಟ್ಟಂತಹ ಆಡಳಿತ ಬೇರೆ ಯಾವ ರಾಜ್ಯದಲ್ಲೂ ಇಲ್ಲ ಎಂದು ಒಂದು ನಿರ್ಣಯಕ್ಕೆ ಬರಲಿಕ್ಕೆ ಇವರಿಗೆ ಯಾವ ಅಂಕೆ ಸಂಖ್ಯೆಗಳು ಹಾಗೂ ಯಾವ ಯಾವ ರಾಜ್ಯದ ಆಡಳಿತದ ಸಂಶೋಧನೆಗಳು ಸಿಕ್ಕಿ ಈ ರೀತಿ ನಿರ್ಣಯಕ್ಕೆ ಬಂದಿದ್ದಾರೋ ಎಂದು ನನಗೆ ಹೇಳುವುದಕ್ಕೆ ಆಗುವುದಿಲ್ಲ. ಅವರೂ ಬಹಳ ಆಳವಾಗಿ ಅಭ್ಯಾಸ ಮಾಡುತ್ತಿದ್ದಾರೆ ಎಂದು ಇಷ್ಟು ಮಾತ್ರ ನಾನು ಹೇಳಬಲ್ಲೆ. ನನಗೆ ಇರುವ ಅನುಭವದ ಮೇಲೆ ನಮ್ಮ ಮೈಸೂರು ರಾಜ್ಯದಲ್ಲಿ ಇವೊತ್ತು ಇರುವ ಆಡಳಿತ ದೇಶದ ಇತರ ಎಲ್ಲ ಭಾಗಗಳಲ್ಲಿನ ಆಡಳಿತಕ್ಕಿಂತ ಸರಾಸರಿ ಆಡಳಿತಕ್ಕಿಂತ ಉತ್ತಮವಾಗಿದೆ. ದೇಶದಲ್ಲಿ ಎಲ್ಲ ಭಾಗಗಳಲ್ಲಿಯೂ ಅತಿ ಉತ್ತಮವಾಗಿ ನಡೆಯುತ್ತಿದೆ ಎಂದು ಉತ್ಪ್ರೇಕ್ಷೆಯಿಂದ ನಾನು ಹೇಳುತ್ತಿಲ್ಲ. ಒಂದು ಮಾತನ್ನು ಇಲ್ಲಿ ತಾವು ನೆನಪಿನಲ್ಲಿ ಇಡಬೇಕು. ಜನತೆಯು ರಾಜ್ಯವಿರುವಾಗ ಪ್ರಜಾತಂತ್ರವಿರುವಾಗ ಪ್ರಜೆಗಳಿಂದ ಚುನಾಯಿತರಾಗಿರುವ ಅರ್ಹರಾದ ಪ್ರತಿನಿಧಿಗಳಿಗೆ ಆಡಳಿತ ಸಿಗುವಂತೆ ಮಾಡಿದ್ದಾರೆ. ಆದರೆ ಎಲ್ಲ ಚೆನ್ನಾಗಿದೆ ಎಂದು ಹೇಳುತ್ತಿಲ್ಲ. ಇದರಲ್ಲಿ ಸ್ವಲ್ಪ ಸತ್ಯಾಂಶವಿದೆ. ಅದನ್ನು ನಾವೂ ಒಪ್ಪಬಹುದು. ಅಂತಹ ದೋಷಗಳಿದ್ದರೆ ತಿದ್ದಿಕೊಳ್ಳಬಹುದು. ಜನಗಳ ಮಟ್ಟವನ್ನು ಉತ್ತಮಪಡಿಸುವುದಕ್ಕೆ ಪ್ರಜಾ ಸರಕಾರ ಇರುವುದು. ಪ್ರಜೆಗಳಿಗೆ ವಿರೋಧವಾಗಿ ಸರಕಾರ ಆಡಳಿತ ನಡೆಸುವುದು ಸಾಧ್ಯವಿಲ್ಲ. ತಾವು ಭಾಷಣದಲ್ಲಿ ಏನು ಟೀಕೆ ಮಾಡಿದರೋ ಅದರಂತೆ ಏನಾದರೂ ಅಲ್ಲಲ್ಲಿ ತಪ್ಪುಗಳಿದ್ದರೆ ತೋರಿಸಿಕೊಡಲಿ, ಅದನ್ನು ಒಪ್ಪಿಕೊಳ್ಳೋಣ ಅನಂತರ ಅದನ್ನು ಸರಿಪಡಿಸೋಣ. ಆದರೆ ಅಪಪ್ರಚಾರದಿಂದ ಉದ್ದೇಶದಿಂದ ಕೂಡಿ ಜನರ ಪ್ರತಿನಿಧಿಗಳಾಗಿ ಇಂತಹ ಟೀಕೆ ಮಾಡಿದ್ದು ನೋಡಿ ನಿಜವಾಗಿಯೂ ನನ್ನ ಮನಸ್ಸಿಗೆ ಬಹಳ ನೋವನ್ನುಂಟು ಮಾಡಿತು.

ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿದ್ದರೂ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಕೆಲಸಗಳು ಸರಿಯಾಗಿ ಆಗುತ್ತಿಲ್ಲ ಎಂದು ಹೇಳಿದರು. ಅವರಿಗೆ ಇವೊತ್ತು ನಾನು ಬೇರೆ ಬೇರೆ ರಾಜ್ಯಗಳಲ್ಲಿರುವ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ವರದಿಗಳನ್ನು ತರಿಸಿ ಕೊಡುತ್ತೇನೆ. ಆ ವರದಿಗಳನ್ನೆಲ್ಲಾ ಓದಿ ನೋಡಲಿ. ಅವರಿಗೆ ಈ ವರದಿಗಳು ಸಿಗದೇ ಇದ್ದರೆ ನಾನಾದರೂ ಅವರಿಗೆ ಪ್ರತಿಗಳನ್ನು ತರಿಸಿ ಕೊಡುತ್ತೇನೆ. ಅದನ್ನು ನೋಡಿಕೊಂಡು ನಮ್ಮ ಮೈಸೂರಿನಲ್ಲಿರುವ ಪಬ್ಲಿಕ್ ಸರ್ವಿಸ್‌ನಲ್ಲಿರುವ ಆಡಳಿತ ಯಾವ ರೀತಿ ಇದೆ ಎನ್ನುವುದನ್ನು ಅವರೇ ತೀರ್ಮಾನ ಮಾಡಬಹುದು. ಈ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಆಡಳಿತದಲ್ಲಿ ಅವರ ತೀರ್ಮಾನಗಳಲ್ಲಿ ಅಥವಾ ಅವರ ವ್ಯವಹಾರಗಳಲ್ಲಿ ನಾವು ಹಸ್ತಕ್ಷೇಪ ಮಾಡುತ್ತಿಲ್ಲ. ಇತರ ರಾಜ್ಯಗಳ ಪಬ್ಲಿಕ್ ಸರ್ವಿಸ್ಸು ಕಮಿಷನ್ನುಗಳ ಆಡಳಿತಕ್ಕಿಂತ ಕಡಿಮೆ ಮಟ್ಟದಲ್ಲೇನೂ ನಮ್ಮ ಕಮಿಷನ್ನು ಇವೊತ್ತು ಕೆಲಸ ಮಾಡುತ್ತಿಲ್ಲ.

Sri C. J. MUCKANNAPPA.—Sir, I rise on a point of order. It is an insinuation. It is the sacred duty of the Chair to call the member to order. He is making the insinuation that the other Service Commissions have functioned worse than that of Mysore. That is the inference. If you read his speech in between the lines, you will find this inference.

Mr. DEPUTY SPEAKER.—The Chair has heard him fully. There is no point of order.

Sri C. J. MUCKANNAPPA.—It is in an insinuation. It is casting aspersions on the other Public Service Commissions though they are not before us.

Sri K. LAKKAPPA.—If the Hon'ble Minister will yield for a minute ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಬಗ್ಗೆ ಟೀಕೆ ಮಾಡುವಾಗ ಎಷ್ಟೋ ಅಂಕೆ ಅಂಶಗಳನ್ನು ನಿದರ್ಶನಗಳೊಂದಿಗೆ ಸರಕಾರದ ಗಮನಕ್ಕೆ ತಂದರೂ ಕೂಡ ಇಲ್ಲಿಯವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಹೈಕೋರ್ಟಿನಲ್ಲಿ ಪಬ್ಲಿಕ್ ಸರ್ವಿಸ್ಸು ಕಮಿಷನ್ ಬಗ್ಗೆ ಅವರ ಜವಾಬುದಾರಿ ಹಾಗು ವರ್ತನೆಗಳ ಬಗ್ಗೆ ಎರಡು ಜಡ್ಜ್‌ಮೆಂಟುಗಳು ಅಗ್ರಿಕಲ್‌ಚರಲ್ ಇಲಾಖೆ ಬಗ್ಗೆ ಬಂದಿವೆ. ಇಲ್ಲದೆ ಇರುವುದರ ಬಗ್ಗೆ ಟೀಕೆ ಮಾಡುತ್ತಿಲ್ಲ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ? ತಹ

(SRI K. LAKKAPPA)

ತೀಲುದಾರರುಗಳ ನೇಮಕಗಳ ಬಗ್ಗೆ ಕೂಡ ಹೈಕೋರ್ಟು ತೀರ್ಮಾನ ಕೊಟ್ಟಿದೆ ಇಂತಹ ನೂರಾರು ಕೇಸುಗಳಲ್ಲಿ ಸರಕಾರದ ಗಮನವನ್ನು ಸೆಳೆದು ಪಬ್ಲಿಕ್ ಸರ್ವಿಸ್ಸು ಕಮಿಷನ್ನು ನಡೆಯುತ್ತಿರುವ ರೀತಿ ನೀತಿಗಳನ್ನು ವಿವರವಾಗಿ ಹೇಳಿದ್ದಾರೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

Sri C. J. MUCKANNAPPA.—Sir, you did not give a ruling on the point raised by me. Yesterday, the Hon'ble Speaker pulled up my friend... .....

Mr. DEPUTY SPEAKER.—Is it a point of order, or what is it ?

Sri C. J. MUCKANNAPPA.—It is casting aspersions......

Mr. DEPUTY SPEAKER.—I have heard the whole matter. What he said was, in the case of our Public Service Commission, the Government have differed in lesser number of cases than in other States. That is what he said. But the member is inferring so many things from it. The matter ends here.

ಶ್ರೀ ರಾಮಕೃಷ್ಣ ಹೆಗಡೆ.—1963-64 ನೇ ಸಾಲಿನ ವರದಿಯಲ್ಲಿ ಹೇಳಿರುವಂತೆ ಸರಕಾರ ಪಬ್ಲಿಕ್ ಸರ್ವಿಸ್ಸು ಕಮಿಷನ್ನಿಗೆ ಒಟ್ಟು 182 ವಿಷಯಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ಸರಕಾರ ಕೇಳಿತ್ತು. ಇದರಲ್ಲಿ ಸರಕಾರ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಭಿಪ್ರಾಯಗಳನ್ನು ಒಪ್ಪದೇ ಇರತಕ್ಕದ್ದು ಕೇವಲ 11 ವಿಷಯಗಳಲ್ಲಿ ಮಾತ್ರ. ಈ ಹನ್ನೊಂದು ವಿಷಯಗಳಲ್ಲಿ ಹೆಚ್ಚಿನ ವಿಷಯಗಳು ಎಂದರೆ ಶಿಸ್ತಿನ ಕಾರ್ಯಕ್ರಮಗಳ ಬಗ್ಗೆ ಸಂಬಂಧಪಟ್ಟದ್ದು. ಯಾವ ಸಂದರ್ಭದಲ್ಲಿ ಸರಕಾರದ ಎನ್‌ಕ್ವೈರಿ ಆಫೀಸರು ಸೂಚನೆಮಾಡಿರುವ ಶಿಕ್ಷೆಗಳ ಬಗ್ಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಇಂತಹ ಶಿಕ್ಷೆ ಬಹು ಕಠೋರವಾಗುತ್ತದೆ ಇದನ್ನು ಸ್ವಲ್ಪ ಯೋಚಿಸಿ, ಸೌಮ್ಯವಾದ ಶಿಕ್ಷೆ ಕೊಡಬಹುದು ಎಂದು ಹೇಳಿದ್ದಾರೆ, ಎಲ್ಲಿ ಅವರು ವ್ಯವಹಾರಗಳನ್ನು ಸರಿಯಾಗಿ ನೋಡದೆ ಬಿಟ್ಟು ಬಿಟ್ಟಿದ್ದರೋ ಅಂತಹ ಸಂದರ್ಭಗಳನ್ನು ಅವರಿಗೆ ಪುನಃ ತೋರಿಸಿ, ಅವರು ಮಾಡಿದಂತಹ ಅಪರಾಧ ಎಷ್ಟು ಘೋರವಾಗಿದೆ, ಅದಕ್ಕಾಗಿ ಅವರಿಗೆ ಶಿಕ್ಷೆಯನ್ನು ಕೊಡಬೇಕಾಗುತ್ತದೆ ಎಂದು ಅವರ ಗಮನಕ್ಕೂ ತಂದಿದ್ದೇವೆ. ಅದರಂತೆ ಮಾರುವರ್ಷ, ಎಂದರೆ 1964-65ನೆಯ ವರ್ಷದ ಅವಧಿಯಲ್ಲಿ, ಒಟ್ಟು 148 ವಿಷಯಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ಕೇಳಿ, ಅದರಲ್ಲಿ ಕೇವಲ ನಾಲ್ಕು ವಿಷಯಗಳಲ್ಲಿ ಮಾತ್ರ ಸರ್ಕಾರದವರು ಅವರ ಅಭಿಪ್ರಾಯವನ್ನು ಒಪ್ಪಲಿಲ್ಲ. ನಾನೂ ಸ್ವಲ್ಪಮಟ್ಟಿಗೆ ಸಾರ್ವಜನಿಕರ ಅಭಿಪ್ರಾಯವನ್ನು ತಿಳಿದುಕೊಳ್ಳುತ್ತೇನೆ. ಎಲ್ಲಾ ಜನರು, ಶ್ರೀ ಶಿವಪ್ಪನವರ ಹತ್ತಿರ, ಶ್ರೀ ಲಕ್ಕಪ್ಪನವರ ಹತ್ತಿರ, ಅಥವಾ ಶ್ರೀ ರೇವಣ ಸಿದ್ದಪ್ಪನವರ ಹತ್ತಿರ ಹೋಗಿ ತಮ್ಮ ದುಃಖವಷ್ಟು ಹೇಳುತ್ತಾರೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಅವರ ಹತ್ತಿರ ಎಷ್ಟು ಹೋಗುತ್ತಾರೋ, ಅದೇ ರೀತಿ ನಮ್ಮ ಹತ್ತಿರ ಕೂಡ ಬರುತ್ತಾರೆ. ಜನರ ಅಭಿಪ್ರಾಯ ಹೇಗೆ ಇದೆ, ಪಬ್ಲಿಕ್ ಸರ್ವಿಸ್ ಕಮಿಷನ್ ಹೇಗೆ ಇದೆ, ಅಪೊಸಿಶನ್ ಸದಸ್ಯರ ಅಭಿಪ್ರಾಯ ಹೇಗೆ ಇದೆ, ಮಂತಾದುವುಗಳು ನಮಗೂ ಗೊತ್ತಾಗುತ್ತದೆ. ಅವರ ಹತ್ತಿರ ಒಂದು ಹೇಳುವವನು ನಮ್ಮ ಹತ್ತಿರ ಒಂದು ತರ ಹೇಳುತ್ತಾನೆಂದು ನಂಬುವುದಕ್ಕಾಗುವುದಿಲ್ಲ. ನಾನು ತಿಳಿದುಕೊಂಡ ಮಟ್ಟಿಗೆ ನಮ್ಮ ರಾಜ್ಯ ಸರ್ಕಾರದ ಪಬ್ಲಿಕ್ ಸರ್ವಿಸ್ ಕಮಿಷನ್‌ನ ಮೇಲೆ ಒಳ್ಳೆಯ ಗೌರವಯುತವಾದ ಅಭಿಪ್ರಾಯ ಸಾರ್ವಜನಿಕರಲ್ಲಿದೆಯೆಂದು ತಿಳಿದುಕೊಂಡಿದ್ದೇನೆ. ಈ ಅಭಿಪ್ರಾಯದಲ್ಲಿ ಪಬ್ಲಿಕ್ ಸರ್ವಿಸ್ ಕಮಿಶನ್ ಯಾವುದೇ ಆಮಿಶ ಅಥವಾ ಪ್ರಭಾವಕ್ಕೊಳಗಾಗತಕ್ಕದ್ದು ಎನ್ನುವ ಅಭಿಪ್ರಾಯವೂ ಇದೆ. ಪ್ರಭಾವಕ್ಕೂ ಅಪ್ರತ್ಯಕ್ಷವಾಗಿ ಒಳಗಾಗಬಹುದು. ಅದನ್ನು ಸಂಪೂರ್ಣವಾಗಿ ತಪ್ಪಿಸುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ, ಪಬ್ಲಿಕ್ ಸರ್ವಿಸ್ ಕಮಿಶನ್ ತಮ್ಮ ನೀತಿ ನಿಯಮಗಳಿಗನುಸಾರವಾಗಿ ನಿದಾಕ್ಷಿಣ್ಯವಾಗಿ ಆದೇಶಗಳನ್ನು ಕೊಡುತ್ತಾ ಬಂದಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಮತ್ತು ಕೆಲವು ಟೀಕೆಗಳನ್ನು ಮಾನ್ಯ ಶ್ರೀ ಕೃಷ್ಣ ಅವರು ಮಾಡಿದ್ದಾರೆ. ಅದು ಪ್ರೊಬೇಶನರಿ ನೇಮಕದ ವಿಚಾರದಲ್ಲಿ. ಕೆಲವು ಸಂದರ್ಭಗಳಲ್ಲಿ ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್ ಆಗದಿರುವುದರಿಂದ, ಮತ್ತು ಆ ನೇಮಕವನ್ನು ಅತಿ ತ್ವರಿತವಾಗಿ, ಅಗತ್ಯವಾಗಿ ಮಾಡಬೇಕಾದುದರಿಂದ ಕೆಲವು ಕಾಂಪ್ಲಿಕೇಶನ್ಸ್ ಬರುತ್ತದೆ. ಮತ್ತು ಕೆಲವು ಸಂದರ್ಭಗಳಲ್ಲಿ ಟೆಕ್ನಿಕಲ್ ಇಲಾಖೆಗಳಲ್ಲಿ, ಎಂದರೆ,

ಮುಖ್ಯವಾಗಿ ಹೆಲ್ತ್ ಇಲಾಖೆಯ ಬಗ್ಗೆ ಹೇಳುವುದಾದರೆ, ನಾವು ಈಗ ಇರತಕ್ಕಂತಹ ಪದ್ಧತಿಯ ಮುಖಾಂತರವಾಗಿ ನೇಮಕ ಮಾಡಲಿಕ್ಕೆ ಹೋದರೆ, ಅದು ಬಹಳ ದೀರ್ಘವಾಗುತ್ತದೆ, ಅಷ್ಟೇ ಅಲ್ಲ ಅದೇ ಸಮಯಕ್ಕೆ ಮಾಡದೆ ಹೋದರೆ ಕೆಲಸವು ಕೆಟ್ಟು ಹೋಗತಕ್ಕ ಪರಿಸ್ಥಿತಿ ಬರುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲವು ವ್ಯತ್ಯಾಸಗಳಾಗುವುದನ್ನು ನಾವು ನೋಡುತ್ತಿದ್ದೇವೆ. ಈ ವಿಷಯದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಹಿಂದೆ ಆದಂತಹದು ಪುನಃ ಆಗುವುದಿಲ್ಲ ಎಂದು ಸರ್ಕಾರದ ಪರವಾಗಿ ನಾನು ಭರವಸೆ ಕೊಡಬಯಸುತ್ತೇನೆ. ಮಾನ್ಯ ಶ್ರೀ ಮುಕ್ಕಣ್ಣಪ್ಪನವರು ಹೇಳಿದರು- ಡಿ. ಎಲ್. ಆರ್. ಸಿ. ಮತ್ತು ಎಸ್. ಎಲ್. ಆರ್. ಸಿ.ಯವರು ರಿಕ್ರೂಟ್ ಮಾಡುವುದನ್ನು, ನಿಲ್ಲಿಸಿದ್ದಾರೆ ಎಂದು. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಹಿಂದೆ ಟೆಂಪರರಿಯಾಗಿ ಲೋಕಲ್ ಕ್ಯಾಂಡಿಡೇಟಾಗಿ ಯಾರನ್ನು ನೇಮಕ ಮಾಡಿದ್ದಾರೋ ಅಂಥವರನ್ನು ಎಲ್ಲರನ್ನೂ ಸರ್ಕಾರದ ಕೆಲಸದಿಂದ ತೆಗೆಯ ಬಾರದೆಂದು ಮಾಡಿದ್ದಾರೆ ; ಮತ್ತು ಅದನ್ನು ಈಗಾಗಲೇ ಜಾರಿಗೆ ತಂದಿದ್ದಾರೆ. ಯಾವುದೋ ಒಂದು ಕಾರಣದಿಂದ ಒಬ್ಬ ವ್ಯಕ್ತಿಯನ್ನು ಅವನ ಅರ್ಹತೆಯನ್ನು ನೋಡಿ ಕೆಲಸಕ್ಕೆ ತೆಗೆದುಕೊಂಡ ಮೇಲೆ, 3–4–5 ವರ್ಷ ಕೆಲಸ ಮಾಡಿಸಿ, ಆಮೇಲೆ ನಿನ್ನನ್ನು ಇಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಅನ್ಯಾಯವಾಗುತ್ತದೆಂದು ಗೊತ್ತು. ಆದ್ದರಿಂದ ಎಲ್ಲೆಲ್ಲಿ ಆ ರೀತಿ ಇದೆ, ಲೋಕಲ್ ಕ್ಯಾಂಡಿಡೇಟ್, ಅಥವಾ ಬೇರೆ ಯಾವ ರೀತಿಯಿಂದಲಾದರೂ ನೇಮಕವಾಗಿದ್ದರೆ, ಅಂತಹವರನ್ನು ನಿರುದ್ಯೋಗಿಗಳನ್ನಾಗಿ ಮಾಡಿ, ಅವರಿಗೆ ತೊಂದರೆಯನ್ನು ಕೊಡಬೇಕೆಂದು ಸರ್ಕಾರಕ್ಕೆ ಇಚ್ಛೆ ಇಲ್ಲ. ಪ್ರೊಬೇಶನರ್ಸ್ ನೇಮಕದ ವಿಚಾರದಲ್ಲೂ ಕೂಡ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದೇವೆ, ಈ ಎಲ್ಲಾ (ಕ್ಲಾಸ್ 4 ಬಿಟ್ಟು) ರಿಕ್ರೂಟ್‌ಮೆಂಟ್ ಪಬ್ಲಿಕ್ ಸರ್ವಿಸ್ ಮುಖಾಂತರವೇ ಆಗಬೇಕೆಂದು. ಹೀಗೆ ಎಲ್ಲಾ ಆಗುವುದಾದರೆ, ಸ್ವಾಭಾವಿಕವಾಗಿ ವಿಳಂಬವಾಗುವಂತಾಗುತ್ತದೆ. ಈ ವಿಳಂಬವನ್ನು ಕಡಿಮೆ ಮಾಡಬೇಕು. ಅದಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು, ತ್ವರಿತವಾಗಿ ಯಾವ ರೀತಿ ಮಾಡಬೇಕು ಎಂಬುದನ್ನೆಲ್ಲಾ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ಮುಖ್ಯವಾಗಿ ಕೆಲವು ಟೀಕೆಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಈ ಪಬ್ಲಿಕ್ ಸರ್ವಿಸ್ ಕಮಿಶನ್ ಹೈಕೋರ್ಟಿನಂತೆ ಸಂಪೂರ್ಣವಾಗಿ ಸ್ವಾತಂತ್ರ್ಯವಾಗತಕ್ಕಂತಹ ಅಂಗ ವಲ್ಲ. ಅದು ಒಂದು ಕನ್‌ಸ್ಟಲ್ಟೇಟಿವ್ ಅಡ್ವೈಸರಿ ಬಾಡಿ. ಆದರೆ ಅವರು ಕೇವಲ ಅಡ್ವೈಸರಿ ಬಾಡಿ ಎಂದು ಎಲ್ಲಾ ಅವರು ಕೊಡತಕ್ಕ ಸಲಹೆಗಳನ್ನು ಮನಸ್ಸಿಗೆ ಬಂದ ಹಾಗೆ ಮಾಡುವ ಪರಿಸ್ಥಿತಿಯಲ್ಲೂ ಇಲ್ಲ. ಅವರಿಗೆ ಸರಿಯಾದಂತಹ ಗೌರವ ಕೊಡಬೇಕು. ಅವರು ಕೊಡತಕ್ಕಂತಹ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇವೆ ಗೌರವ ಕೊಡುತ್ತೇವೆ. ಮತ್ತು ಎಲ್ಲಿ ಅತ್ಯಂತ ಅಗತ್ಯತೆ, ಇದೆ, ಅಂದರೆ, ನಾನು ಈಗ ಕೊಟ್ಟಂತಹ ಕೆಲವು ಸಂದರ್ಭಗಳಲ್ಲಿ ಮಾತ್ರ ಅವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ನಡೆದ್ದೇವೆ, ಇನ್ನುಳಿದ ಕಡೆ ಅವರ ಅಭಿಪ್ರಾಯಕ್ಕೆ ಚಾಚೂ ತಪ್ಪದೆ ಅವರ ಅಭಿಪ್ರಾಯವನ್ನು ಮನ್ನಿಸಿದ್ದೇವೆಂದು ನಾನು ಹೇಳಬಯಸುತ್ತೇನೆ. ಕೊನೆಯದಾಗಿ ಮಾನ್ಯ ಸದಸ್ಯರುಗಳು ಮಾಡಿದಂತಹ ಸೂಚನೆಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈಗ ಇಂಟರ್‌ವೀನಿಂಗ್ ಡಿಬೇಟ್ ಮಾಡಬಹುದೇ ?

ಉಪಾಸಭಾಧ್ಯಕ್ಷರು.—ಈಗ ಬೇಡ.

†ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಈ ಮನೆಯಲ್ಲೂ ಸಹ ಮಾನ್ಯ ಸದಸ್ಯರುಗಳು ಮಾಡಿರತಕ್ಕಂತಹ ಟೀಕೆಗಳಿಗೆ ಉತ್ತರ ಕೊಡಬೇಕೆಂದು ಸದಸ್ಯರು ನನಗೆ ಅವಕಾಶ ತಂದುಕೊಟ್ಟದ್ದಕ್ಕಾಗಿ ಅವರಿಗೆ ನಾನು ಋಣಿಯಾಗಿದ್ದೇನೆ ಮತ್ತು ಅವರು ನನ್ನ ಮೇಲೆ ಇಟ್ಟಿರತಕ್ಕ ಅಭಿಮಾನಕ್ಕೂ ಋಣಿಯಾಗಿದ್ದೇನೆ. ಈಗ ಆಗಿರತಕ್ಕಂತಹ ಚರ್ಚೆಗೆ ಉತ್ತರವನ್ನು ಸಾಕಷ್ಟು ರೀತಿಯಲ್ಲಿ ವಿಸ್ತಾರವಾಗಿ ನಮ್ಮ ಹಣಕಾಸಿನ ಮಂತ್ರಿಗಳು ಕೊಟ್ಟಿದ್ದಾರೆ. ಬಹುಶಃ ಹೆಚ್ಚಿಗೆ ಹೇಳತಕ್ಕದ್ದು ಉಳಿದಿಲ್ಲ ಎಂದು ನನಗೆ ಕಾಣುತ್ತದೆ. ಕೆಲವು ಸದಸ್ಯರುಗಳು ಸಮಯ ಸಿಕ್ಕಿದಾಗ ಅವಶ್ಯಕವೋ ಅನಾವಶ್ಯಕವೋ ಸಂಬಂಧವಿದೆಯೋ, ಅಸಂಬಂಧವಿದೆಯೋ ಎಂಬುದನ್ನು ಯಾವುದನ್ನೂ ಸಾಕಷ್ಟು ಯೋಚನೆ ಮಾಡದೆ, ಅವಕಾಶ ಇದೆಯೆಂದು ಸರ್ಕಾರವನ್ನು ಟೀಕೆ ಮಾಡತಕ್ಕಂತಹ ಹವ್ಯಾಸನ್ನು ಇಟ್ಟುಕೊಂಡಿದ್ದಾರೆ. ಆದರೆ ಅದಕ್ಕೂ ನಾನು ಅಭ್ಯಂತರ ಮಾಡುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮುಖ್ಯಮಂತ್ರಿಗಳು ಸಾಮಾನ್ಯವಾಗಿ...

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಗೋಪಾಲಗೌಡರ ವಿಚಾರಕ್ಕೆ ಬರುತ್ತಿದ್ದೇನೆ. ಇಂತಹ ಒಂದು ಮನಸ್ಸಿನ ಪರಿಸ್ಥಿತಿ ಎಲ್ಲಿಯವರೆಗೆ ಹೋಗುತ್ತದೆ ಎಂದರೆ, ಅದು ಎಲ್ಲೆ ಮೀರಿ ಹೋಗುತ್ತದೆ. ಸರ್ಕಾರವನ್ನು ಬಯ್ಯಬೇಕು, ಕೆಟ್ಟ ಹೆಸರು ತರಬೇಕು, ಎಂದು ಒಂದು ಅಮಲು ಜಾಸ್ತಿಯಾಗುತ್ತಾ ಇದೆ. ಆದ್ದರಿಂದ ಇದು ಬಂದಾಗ ಏನು ಹೇಳುತ್ತಾರೆ, ಏನು ಹೇಳುವುದಿಲ್ಲ ಎಂದು ಗೊತ್ತಾಗುವುದಿಲ್ಲ. ಈ ಒಂದು ಭಾವನೆಯನ್ನು ಉದ್ರೇಕಗೊಳಿಸಿಕೊಂಡು ಅಮಲಿನಲ್ಲಿ ಏನಾ

(ಶ್ರೀ ಎಸ್. ನಿಜಲಿಂಗಪ್ಪ)

ದರೂ ಹೇಳುತ್ತಾರೆ. ಅದು ಇರತಕ್ಕದ್ದು ಸ್ವಾಭಾವಿಕ. ಅದು ಇರುತ್ತದೆ. ಶ್ರೀ ಗೋಪಾಲ ಗೌಡರು ಎಂಥ ಸ್ವಭಾವದವರು ಅಂದರೆ, ಒಳ್ಳೆಯ ಸ್ವಭಾವದವರು, ಒಳ್ಳೆಯ ಮನುಷ್ಯರು ಆಗಿದ್ದಾರೆ ಎಂಬುದು ನನಗೆ ಗೊತ್ತಿದೆ. ಅದರೆ ಅವರು ಮಾತನಾಡುವುದಕ್ಕೆ ನಿಂತಾಗ ಮಾತ್ರ ಮಾತನಾಡುತ್ತಾ ಎಲ್ಲಿಗೋ ಹೋಗುತ್ತಾರೆ. ಮುಖ್ಯ ವಿಷಯ ಅವರಿಗೆ ಮರೆತು ಹೋಗುತ್ತದೆ. ಏಕೆಂದರೆ ಅವರು ಸಾಹಿತ್ಯ ಬಲ್ಲವರು ಚೆನ್ನಾಗಿ ಹೇಳುತ್ತಾರೆ, ಅವರು ಹಾಗೆ ಹೇಳಲಿ. ಟೀಕೆ ಮಾಡತಕ್ಕಂಥ ವಿಚಾರದಲ್ಲಿ ಕೂಡ ಅದಕ್ಕೆ ಯೋಗ್ಯವಾಗಿರತಕ್ಕಂಥ ಒಂದು ಸಮಯ, ಸಂದರ್ಭ ಅದಕ್ಕೆ ಒಂದು ಮಿತಿ ಬೇಕು. ಮಿತಿ ಮೀರಿ ಟೀಕೆ ಮಾಡುತ್ತಾ ಹೋದರೆ ಅದು ಚೆನ್ನಾಗಿ ಕಾಣುವುದಿಲ್ಲ. ಅದು ಸಹಜವಾಗಿ ಇರುವುದಿಲ್ಲ. ಆದುದರಿಂದ ಅಂಥಾದ್ದನ್ನು ಹೆಚ್ಚಾಗಿ ನಾವು ಗಮನದಲ್ಲಿಟ್ಟು ಕೊಳ್ಳಬೇಕಾಗಿಲ್ಲ.

12-30 P.M.

ಯಾವುದೇ ಒಂದು ವಿಷಯದ ಬಗ್ಗೆ ಸರ್ವೇ ಸಾಧಾರಣವಾಗಿ ಟೀಕೆ ಬರುತ್ತದೆ. ಆದರೆ ಇವತ್ತಿನ ದಿವಸ ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರ ಮೇಲೆ ಯಾವುದೇ ರೀತಿಯ ಟೀಕೆ ಬಂದರೆ ಅದು ಸತ್ಯಕ್ಕೆ ಬಹು ದೂರವಾದುದು ಎಂದು ನಾನು ಹೇಳುತ್ತೇನೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ನೇಮಕವಾಗಿರತಕ್ಕಂಥ ಈ ಸದಸ್ಯರು ಎಲ್ಲರೂ ಯೋಗ್ಯರೂ ಹೌದು, ನಿಷ್ಪಕ್ಷಪಾತಿಗಳೂ ಹೌದು, ಅವರೆಲ್ಲರೂ ಗೌರವಕ್ಕೆ ಪಾತ್ರರೂ ಆಗಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಅವರ ಮೇಲೆ ಒಂದೂ ಆಪಾದನೆ ಬಂದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ತಪ್ಪು ಮಾಡಿರಬಹುದು. ಅವರು ಹೇಳಿದ್ದನ್ನು ಸರಕಾರ ಒಪ್ಪದೇ ಇರಬಹುದು. ಸರಕಾರಕ್ಕೆ ಈ ಅಧಿಕಾರ ಇದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಇದು ಒಂದು ಅಡ್ವೈಜರಿ ಬಾಡಿ ಆಗಿದೆ. ಇಷ್ಟು ಜನ ಕ್ಯಾಂಡಿಡೇಟ್ಸ್ ಬೇಕು ಎಂದು ಸರಕಾರ ತಿಳಿಸಿದರೆ ಅವರು ರೆಕಮೆಂಡ್ ಮಾಡುತ್ತಾರೆ. ಆದರೆ ಶಿಸ್ತಿಗೆ ವಿರೋಧವಾಗಿ ನಡೆದವರ ಬಗ್ಗೆ ಏನು ಮಾಡಬೇಕು ಎಂದು ಕೇಳತಕ್ಕಂಥದ್ದು ನಮ್ಮ ಕರ್ತವ್ಯ. ನಾವು ಕೇಳುತ್ತೇವೆ. ಅವರು ಹೇಳುವುದಕ್ಕೆ ಇದ್ದಾರೆ. ಆದರೆ ಅವರು ಹೇಳಿದ್ದನ್ನು ನಾವು ಕೇಳಲೇಬೇಕು ಎಂದು ಇಲ್ಲ. ಕೆಲವು ಸಲ ಅವರು ಹೇಳಿದ್ದನ್ನು ನಾವು ಒಪ್ಪಬಹುದು. ಅಥವಾ ಒಪ್ಪದೇ ಇರಬಹುದು. ಕಳೆದ ಎರಡು ವರ್ಷದ ಅವಧಿಯಲ್ಲಿ 400 ಕೇಸುಗಳು ಇದ್ದವು. ಅವುಗಳಲ್ಲಿ 11 ಮತ್ತು 4 ಅಂದರೆ, 15 ಕೇಸುಗಳಲ್ಲಿ ಸರಕಾರ ಅವರ ಅಭಿಪ್ರಾಯವನ್ನು ಪೂರ್ತಿಯಾಗಿ ಒಪ್ಪಿಲ್ಲ. ಅದೂ ಕೂಡ ಶಿಸ್ತು ಭಂಗ ಮಾಡಿದ ಕೇಸುಗಳಲ್ಲಿ ಎಷ್ಟು ಶಿಕ್ಷೆ ಕೊಡಬೇಕು ಎಂಬ ವಿಚಾರದಲ್ಲಿ ಮಾತ್ರ. ಈ ವಿಚಾರ ಹೀಗಿರುವಾಗ ಅವರು ಸರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ಹಸ್ತಕ್ಷೇಪ ಮಾಡುತ್ತಾರೆ ಎಂದು ಹೇಳುವುದು ತೀರಾ ಸುಳ್ಳು, ಅದು ಸತ್ಯಕ್ಕೆ ಸಾವಿರಾರು ಮೈಲಿ ದೂರ. ಆ ರೀತಿ ಏನಾದರೂ ಹಸ್ತ ಕ್ಷೇಪ ಮಾಡಿದ ವಿಚಾರ ಇದ್ದರೆ ಸದಸ್ಯರು ನನ್ನ ಹತ್ತಿರ ಬಂದು ಕಿವಿಯಲ್ಲಿ ಹೇಳಲಿ. ಯಾವುದೇ ಸದಸ್ಯ ಇರಲಿ, ಮಂತ್ರಿಯೇ ಇರಲಿ, ಹಸ್ತಕ್ಷೇಪ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದರೆ, ತಮಗೆ ಬೇಕಾದವರ ನೇಮಕ ಮಾಡುವುದರ ಬಗ್ಗೆ ಪ್ರಭಾವ ಬೀರಿದ್ದರೆ, ಅಂಥವರು ಇಲ್ಲಿ ಇರುವುದಕ್ಕೆ, ಮಂತ್ರಿ ಸ್ಥಾನದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಅಂಥ ಮನುಷ್ಯ ಇಲ್ಲಿ ಇರುವುದಕ್ಕೆ ಲಾಯಖ್ ಅಲ್ಲ. ಅಂಥ ವಿಷಯ ನನ್ನ ಹತ್ತಿರ ಬಂದು ಹೇಳಲಿ. ಸದಸ್ಯರು ಆಕ್ಷೇಪಣೆ ತಂದಿದ್ದಾರೆ, ನಾವು ವಿಚಾರ ಮಾಡಿದ್ದೇವೆ ಎಂದು ಈ ಸಭೆಯ ಮುಂದೆ ನಾನು ಧೈರ್ಯವಾಗಿ ಹೇಳುತ್ತೇನೆ; ಅಭಿಮಾನದಿಂದ ಹೇಳುತ್ತೇನೆ. ಅಂಥ ವಿಚಾರ ಯಾರಮೇಲೆಯೇ ಇರಲಿ, ಯಾವ ಸದಸ್ಯರ ಮೇಲೆಯೇ ಇರಲಿ, ಅದು ಸತ್ಯಕ್ಕೆ ದೂರವಾದುದು. ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರು ಚೆನ್ನಾಗಿ ನಡೆದುಕೊಂಡು ಬಂದಿದ್ದಾರೆ. ಯಾರೂ ಹಸ್ತ ಕ್ಷೇಪ ಮಾಡಿಲ್ಲ, ಹಸ್ತಕ್ಷೇಪಕ್ಕೆ ಭಯಪಟ್ಟುಕೊಂಡು ನಡೆದಿಲ್ಲ ಎಂಬುದು ಈ ರಿಪೋರ್ಟ್‌ನಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ಯಾವ ದಾಕ್ಷಿಣ್ಯಕ್ಕೂ ಒಳಪಟ್ಟಿಲ್ಲ. ದಾಕ್ಷಿಣ್ಯಕ್ಕೆ ಒಳಗಾಗದೇ ಇರುವುದರಿಂದ ಅವರು ಸ್ಪಷ್ಟವಾಗಿ ಧೈರ್ಯದಿಂದ ಸರಕಾರ ತಪ್ಪು ಮಾಡಿದ್ದಾರೆ ಎಂದು ಹೇಳುತ್ತಾರೆ. ಹೀಗಿರುವಾಗ ಹಸ್ತಕ್ಷೇಪ ಮಾಡಿದೆ ಎಂದು ಹೇಳುವುದು ಒಪ್ಪತಕ್ಕಂಥ ಮಾತಲ್ಲ. ಮಾನ್ಯ ಸದಸ್ಯರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು, ಇದು ಅರ್ಥವಿಲ್ಲದ ಮಾತು ಎಂದು. ಕೆಲವು ವಿಚಾರದಲ್ಲಿ ಭಿನ್ನಾಭಿಪ್ರಾಯವಿರುತ್ತದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಅವರು ಒಂದು ಅಡ್ವೈಜರಿ ಬಾಡಿ ಆಗಿದ್ದಾರೆ. ಅವರ ಅಭಿಪ್ರಾಯ ಒಪ್ಪಲಿಲ್ಲ ಎಂಬುದು ಕೇವಲ ಕೆಲವು ಸಂಧರ್ಭದಲ್ಲಿ ಮಾತ್ರ. 400 ಕೇಸುಗಳಲ್ಲಿ 10—15 ಕೇಸುಗಳಲ್ಲಿ ಮಾತ್ರ ವ್ಯತ್ಯಾಸ ಕಂಡು ಬರುತ್ತದೆ. ಅವರು ಹೇಳಿದ ಎಲ್ಲಾ ನೇಮಕ ಮಾಡುವುದಾದರೆ, ಸರಕಾರ ಏತಕ್ಕೆ ಬೇಕು ? ಅವರು ಹೇಳುವುದನ್ನು ಸರಕಾರ ಒಪ್ಪಬಹುದು

ಅಥವಾ ಒಪ್ಪದೇ ಇರಬಹುದು. ಅವರು ಗೌರವಕ್ಕೆ ಪಾತ್ರರು, ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು, ತತ್ವಕ್ಕೆ ಅನುಗುಣವಾಗಿ ಸರ್ವೇ ಸಾಧಾರಣವಾಗಿ ಅವರು ಹೇಳಿದ್ದನ್ನು ಒಪ್ಪಿಕೊಂಡಿದ್ದೇವೆ. ಶೇಕಡ 2 ಅಥವಾ 3 ರಷ್ಟು ಒಪ್ಪಿಲ್ಲ. ಆದುದರಿಂದ ಅಕ್ಷೇಪಣೆ ಮಾಡುವುದಕ್ಕೆ ಯಾವ ಕಾರಣವಿಲ್ಲ.

ಮತ್ತೊಂದು ಏನಾಗಿದೆ ಅಂದರೆ, ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ವಿಚಾರದಲ್ಲಿ ಸ್ವಲ್ಪ ತೊಂದರೆಯಾಗಿದೆ. ಐದು ಭಾಗಗಳು ಸೇರಿ ಹೊಸ ಮೈಸೂರು ರಾಜ್ಯ ರಚನೆಯಾದ ಮೇಲೆ ಇದರ ಬಗ್ಗೆ ಒಂದೇ ಸಮನೇ ಸರಕಾರ ಪ್ರಯತ್ನ ಮಾಡುತ್ತಲೇ ಇದೆ. ಈ ವಿಚಾರದಲ್ಲಿ ಕೆಲವರು ಹೈಕೋರ್ಟಿಗೆ ಹೋಗಿರುವುದರಿಂದ ತೊಂದರೆಯಾಗಿದೆ. ಸಾಮಾನ್ಯವಾಗಿ ಎಲ್ಲಾ ಇಲಾಖೆಗಳ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ತಯಾರಾಗಿವೆ. ಕೇವಲ ಏಳು ಇಲಾಖೆಗಳ ಬಗ್ಗೆ ಮಾತ್ರ ಉಳಿದಿದೆ. ಉಳಿದ ಎಲ್ಲಾ ಕೆಲಸವಾಗಿದೆ. ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ಸ್ ಮತ್ತು ನ್ಯಾಷನಲ್ ಕೆಡೆಟ್ ಎಂದು ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಎರಡು ಭಾಗಗಳಾಗಿವೆ. ಇದನ್ನು ಪಬ್ಲಿಕ್ ಸರ್ವಿಸ್ ಕಮಿಷನಕ್ಕೆ ಕಳಿಸಿದ್ದೇವೆ. ಇದರ ಬಗ್ಗೆ ಅವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಅದು ಕಾಬಿನೆಟ್ ಮುಂದೆ ಬರತಕ್ಕಂಥಾದ್ದು. ಸರಕಾರ ಆಲೋಚನೆ ಮಾಡುತ್ತದೆ. ಡೈರಿ ಪ್ರಾಜೆಕ್ಟ್ ಬಗ್ಗೆ ಸಹ ರೂಲ್ಸ್ ಮಾಡಿ ಕಳಿಸಿದ್ದೇವೆ. ಬಹುಶಃ ಅವರು ಇಷ್ಟರಲ್ಲಿಯೇ ವಾಪಸ್ಸು ಕಳಿಸುತ್ತಾರೆ. ಹೋಂ ಡಿಪಾರ್ಟ್‌ಮೆಂಟ್ ಬಗ್ಗೆ ರೂಲ್ಸ್ ಮಾಡಿ ಕಳಿಸಿದ್ದೇವೆ, ಅವರ ಅಭಿಪ್ರಾಯ ಕೇಳಿದ್ದೇವೆ. ಅವರ ಅಭಿಪ್ರಾಯ ಬಂದಿದೆ. ಇನ್ನು ಮುಂದಿನ ಕ್ರಮ ನಡೆಯತಕ್ಕಂಥಾದ್ದು ಇದೆ. ಅದೇ ರೀತಿ ಕಾಮರ್ಸ್ ಅಂಡ್ ಇಂಡಸ್ಟ್ರೀಜ್ ಮತ್ತು ಸ್ಟೋರ್ಸ್ ಪರ್ಚೇಜಿಂಗ್ ಕಮಿಟಿ ವಿಚಾರದಲ್ಲಿ ಕೂಡ ರೂಲ್ಸ್ ಮಾಡಿ ಕಳಿಸಿದ್ದೇವೆ. ಅವರು ಅಭಿಪ್ರಾಯ ತಿಳಿಸಿದ್ದಾರೆ. ಅದು ಸರಕಾರದ ಆಲೋಚನೆಯಲ್ಲಿದೆ. ಕಂಟ್ರೋಲರ್ ಆಫ್ ಸಿವಿಲ್ ಸಪ್ಲೈಸ್ ಬಗ್ಗೆ ರೂಲ್ಸ್ ಆಗಿಲ್ಲ. ಇದು ಒಂದೇ ಒಂದು ಡಿಪಾರ್ಟ್‌ಮೆಂಟಿನದು ರೂಲ್ಸ್ ಆಗಿಲ್ಲ. ಇದೊಂದು ಸಣ್ಣ ಡಿಪಾರ್ಟ್‌ಮೆಂಟು. ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಬಗ್ಗೆ ರೂಲ್ಸ್ ಮಾಡಿ ಕಳಿಸಿದ್ದು ವಾಪಸ್ಸು ಬಂದಿದೆ. ಈ ವಿಚಾರದಲ್ಲಿ ಸರಕಾರ ನಿರ್ಲಕ್ಷ್ಯ ಮಾಡಿಲ್ಲ. ಇನ್ನು ಎರಡು ಮೂರು ತಿಂಗಳುಗಳಲ್ಲಿ ಈ ಕೆಲಸ ಬಗೆಹರಿಯುತ್ತದೆಂದು ನನಗೆ ಅನಿಸುತ್ತದೆ. ಈ ಕೆಲಸದಲ್ಲಿ ತಡ ಆಗಿದೆ. ಇದಕ್ಕೆ ಕಾರಣವೇನೆಂದರೆ, ಇದರಲ್ಲಿ ಅನೇಕ ರೀತಿಯ ಕುಂದುಕೊರತೆಗಳು ಇವೆ. ಒಂದು ಭಾಗದವರು ನಮಗೆ ಅನ್ಯಾಯವಾಗಿದೆ ಎಂದು ಹೇಳಿದರೆ, ಮತ್ತೊಂದು ಭಾಗದವರು ನಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಎಲ್ಲವನ್ನೂ ಸರಿಯಾಗಿ ಕ್ರೋಡೀಕರಿಸುವುದಕ್ಕೆ ಸಾಕಷ್ಟು ಆಲೋಚನೆ ಮಾಡಿ ರೂಲ್ಸ್ ಮಾಡಿ ಕಳಿಸಿದ್ದೇವೆ. ಅದನ್ನು ಒಪ್ಪಿಕೊಂಡು ಅಭಿಪ್ರಾಯ ತಿಳಿಸಿದ್ದಾರೆ. ಇನ್ನು ಯಾವ ಕಷ್ಟ ಉಳಿಯುವುದಿಲ್ಲ ಎಂದು ನನಗೆ ಅನಿಸುತ್ತದೆ.

ಬಾಕಿ ವಿಚಾರಗಳ ಬಗ್ಗೆ ಅರ್ಥ ಸಚಿವರು ಉತ್ತರ ಹೇಳಿದ್ದಾರೆ. ಪುನಃ ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. ಕೊನೆಯದಾಗಿ ಈ ವರದಿಯನ್ನು ಈ ಮಾನ್ಯ ಸಭೆಯು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ.

Mr. DEPUTY SPEAKER.—The House will adjourn now and will meet again at 1 P.M. on 21st November 1966.

The House adjourned at Forty Minutes past Twelve of the Clock to meet again at one of the Clock on Monday the 21st November 1966.